# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಜೂನ್ 27, 2021

ಸಂಪುಟ : 48 ಸಂಚಿಕೆ : 44 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com




## ವೀಕೆಂಡ್ ಕರ್ಫ್ಯೂ: ವ್ಯಾಪಾರಿಗಳಲ್ಲಿ ಗೊಂದಲ

ದಾವಣಗೆರೆ, ಜೂ.26- ನಗರದಲ್ಲಿ ಶುಕ್ರವಾರ ವೀಕೆಂಡ್ ಕರ್ಫ್ಯೂ ಗೊಂದಲ ಉಂಟಾಗಿತ್ತು. ಸರ್ಕಾರದ ದಿನಕ್ಕೊಂದು ಬಗೆಯ ಆದೇಶಗಳು ಹಾಗೂ ಸರ್ಕಾರ ಗುರುವಾರ ಸಂಜೆ ವೀಕೆಂಡ್ ಕರ್ಫ್ಯೂ ನಿರ್ಬಂಧಗಳ ಬಗ್ಗೆ ಆದೇಶ ನೀಡಿದ್ದು ಗೊಂದಲಕ್ಕೆ ಕಾರಣವಾಗಿತ್ತು.

ಆದೇಶದಲ್ಲಿ ಬೆಳಿಗ್ಗೆ 6 ರಿಂದ ಮಧ್ಯಾಹ್ನ 2 ಗಂಟೆವರೆಗೆ ಅಗತ್ಯ ವಸ್ತುಗಳ ಅಂಗಡಿಗಳನ್ನು ತೆರೆಯಲು ಅನುಮತಿ ಇರುವುದಾಗಿ ಹೇಳಿತ್ತು. ಆದರೆ ಬಹುತೇಕ ವ್ಯಾಪಾರಿಗಳಿಗೆ ಇದರ ಬಗ್ಗೆ ಅರಿವಿರಲಿಲ್ಲ. ಕೆಲವರು ಅಂಗಡಿ ತೆರೆದಿದ್ದರಾದರೂ, ಪೊಲೀಸರು ಬಾಗಿಲು ಮುಚ್ಚಿಸುತ್ತಿದ್ದುದು ಕಂಡು ಬಂತು.

ವಾರಾಂತ್ಯದ ಕರ್ಫ್ಯೂ ಅವಧಿಯಲ್ಲಿ ಆಹಾರ, ದಿನಸಿ, ಹಣ್ಣು, ತರಕಾರಿ, ಮಾಂಸ, ಮೀನು, ಹಾಲು, ಹಾಲಿನ ಬೂತ್‌ಗಳು ಮತ್ತು ಜಾನುವಾರು ಮೇವಿನ ಅಂಗಡಿಗಳು ಬೆಳಿಗ್ಗೆ 6ರಿಂದ ಮಧ್ಯಾಹ್ನ 2ರವರೆಗೆ ಕಾರ್ಯ ನಿರ್ವಹಿಸಬಹುದು. ಮದ್ಯದ ಅಂಗಡಿಗಳು ಬೆಳಿಗ್ಗೆ 6 ರಿಂದ ಮಧ್ಯಾಹ್ನ 2ರವರೆಗೆ ಪಾರ್ಸೆಲ್ ನೀಡಬಹುದೆಂದು ಜಿಲ್ಲಾಡಳಿತ ತಿಳಿಸಿತ್ತು.

ಬೆಳಿಗ್ಗೆ ದಿನಸಿ ಅಂಗಡಿಗಳು ಆರಂಭವಾಗಿದ್ದವು. ಮತ್ತೆ ಕೆಲವೆಡೆ ಸಲೂನ್‌ಗಳು, ಗ್ಯಾರೇಜ್‌ಗಳನ್ನೂ ಸಹ ತೆರೆಯಲಾಗಿತ್ತು. ಆದರೆ ಪೊಲೀಸರು ದಿನಸಿ ಅಂಗಡಿಗಳೂ ಸೇರಿದಂತೆ ಎಲ್ಲಾ ಅಂಗಡಿಗಳನ್ನು ಬಾಗಿಲು ಮುಚ್ಚುವಂತೆ ಸೂಚಿಸುತ್ತಿದ್ದರು. ಇದರಿಂದಾಗಿ ಅಗತ್ಯ ವಸ್ತುಗಳ ಮಾರಾಟಗಾರರು ತೀವ್ರ ಅಸಮಾಧಾನ ವ್ಯಕ್ತಪಡಿಸುತ್ತಿದ್ದು ಕಂಡು ಬಂತು.

# ಕೇಂದ್ರ ಸಂಪುಟಕ್ಕೆ ರಾಘವೇಂದ್ರ?

## ಯಡಿಯೂರಪ್ಪ ಪುತ್ರ ಸೇರಿ ಇಬ್ಬರು ಸೇರ್ಪಡೆಯಾಗುವ ಸಾಧ್ಯತೆ



ಬಿ.ವೈ. ರಾಘವೇಂದ್ರ

ಬೆಂಗಳೂರು, ಜೂ. 26- ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪುತ್ರ ಬಿ.ವೈ. ರಾಘವೇಂದ್ರ ಸೇರಿದಂತೆ ಕೇಂದ್ರ ಸಂಪುಟಕ್ಕೆ ರಾಜ್ಯದಿಂದ ಇಬ್ಬರು ಸೇರ್ಪಡೆಯಾಗುವ ಸಾಧ್ಯತೆ ಇದೆ.

ಪ್ರಧಾನಿ ನರೇಂದ್ರ ಮೋದಿ ಇದೇ 29 ರಂದು ತಮ್ಮ ಮಂತ್ರಿಮಂಡಲವನ್ನು ದೊಡ್ಡ ಪ್ರಮಾಣದಲ್ಲಿ ಪುನರ್‌ರಚನೆ ಮಾಡುತ್ತಿದ್ದು, ಈ ಸಂದರ್ಭದಲ್ಲಿ ರಾಜ್ಯದ ಇಬ್ಬರಿಗೆ ಅವಕಾಶ ಮಾಡಿಕೊಡಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಶಿವಮೊಗ್ಗ ಕ್ಷೇತ್ರ ಪ್ರತಿನಿಧಿಸುತ್ತಿರುವ ರಾಘವೇಂದ್ರ, ಗುಲ್ಬರ್ಗ ಕ್ಷೇತ್ರ ಪ್ರತಿನಿಧಿಸುತ್ತಿರುವ ಡಾ. ಜಾಧವ್ ಹಾಗೂ ಉಡುಪಿ-ಚಿಕ್ಕಮಗಳೂರು ಪ್ರತಿನಿಧಿಸುತ್ತಿರುವ ಶೋಭಾ ಕರಂದ್ಲಾಜೆ ಸಂಪುಟ ಸೇರುವ ನಿರೀಕ್ಷೆ ಇದೆ. ಕೇಂದ್ರ ಸಚಿವರಾಗಿರುವ ಸದಾ ನಂದಗೌಡರನ್ನು ಪಕ್ಷ ಸಂಘಟನೆ, ಇಲ್ಲವೆ ರಾಜ್ಯ ರಾಜಕೀಯಕ್ಕೆ ಕಳುಹಿಸಿದ್ದಲ್ಲಿ, ಶೋಭಾ ಕರಂದ್ಲಾಜೆ ಅವರು ಗೌಡರ ಸ್ಥಾನ ತುಂಬಲಿದ್ದಾರೆ.

ಕೇಂದ್ರದಲ್ಲಿ ರೈಲ್ವೆ ಖಾತೆ ರಾಜ್ಯ ಸಚಿವರಾಗಿದ್ದ ಸುರೇಶ್ ಅಂಗಡಿ ಅವರ ಅಕಾಲಿಕ ಮರಣದಿಂದ ರಾಜ್ಯದಲ್ಲಿ ನೀಡಿದ್ದ ಒಂದು ಪ್ರಾತಿನಿಧ್ಯ ಖಾಲಿ ಉಳಿದಿದೆ. ಈ ಸ್ಥಾನಕ್ಕೆ ರಾಘವೇಂದ್ರ ಭರ್ತಿ ಪಡೆಯಬಹುದು.

ಕಳೆದ ಎರಡು ದಿನಗಳ ಹಿಂದೆ ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಭೂಪೇಂದ್ರ ಯಾಧವ್, ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಈ ಸಂಬಂಧ ಚರ್ಚೆ ನಡೆದಿದೆ. ಇದಲ್ಲದೆ, ಖ್ಯಾತ ಹೃದಯ ತಜ್ಞ ಡಾ. ದೇವಿಪ್ರಸಾದ್ ಶೆಟ್ಟಿ ಅವರ ಹೆಸರು ಕೇಳಿ ಬರುತ್ತಿದೆ.

**ಶಿವಮೊಗ್ಗ ಕ್ಷೇತ್ರ ಪ್ರತಿನಿಧಿಸುತ್ತಿರುವ ರಾಘವೇಂದ್ರ, ಗುಲ್ಬರ್ಗ ಕ್ಷೇತ್ರ ಪ್ರತಿನಿಧಿಸುತ್ತಿರುವ ಡಾ. ಜಾಧವ್ ಹಾಗೂ ಉಡುಪಿ-ಚಿಕ್ಕಮಗಳೂರು ಪ್ರತಿನಿಧಿಸುತ್ತಿರುವ ಶೋಭಾ ಕರಂದ್ಲಾಜೆ ಸಂಪುಟ ಸೇರುವ ನಿರೀಕ್ಷೆ ಇದೆ.**

ಇವರು ಸಂಸತ್ತಿನ ಯಾವುದೇ ಸದನದ ಸದಸ್ಯರಲ್ಲ. ಕೇಂದ್ರ ಸಂಪುಟದಲ್ಲಿ ಈಗಾಗಲೇ ಸದಾನಂದ ಗೌಡರ ಜೊತೆ ಪ್ರಹ್ಲಾದ್ ಜೋಶಿ, ಸಂಪುಟ ದರ್ಜೆಯ ಸಚಿವರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಎರಡೂ ಸ್ಥಾನಗಳಿಂದ ಮತ್ತಿಬ್ಬರಿಗೆ ಅವಕಾಶ ದೊರೆಯುವ ನಿರೀಕ್ಷೆ ಇದೆ.

## ಪಂಚಾಯ್ತಿ ಚುನಾವಣೆಗೆ ಸಿದ್ಧರಾಗಿ

### ಬಿಜೆಪಿ ಮುಖಂಡರಿಗೆ ಸಿಎಂ ಯಡಿಯೂರಪ್ಪ ಕರೆ

ಬೆಂಗಳೂರು, ಜೂ. 26 - ಜಿಲ್ಲಾ, ತಾಲ್ಲೂಕು ಪಂಚಾಯತ್ ಚುನಾವಣೆಗೆ ಸಿದ್ದರಾಗಿ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪಕ್ಷದ ಮುಖಂಡರಿಗೆ ಕರೆ ನೀಡಿದ್ದಾರೆ.

ವರ್ಚುವಲ್ ಆಗಿ ಇಂದು ಬಿಜೆಪಿ ರಾಜ್ಯ ಕಾರ್ಯಕಾರಿಣಿ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹತ್ತು ಹಲವು ಸವಾಲುಗಳನ್ನು ದಿಟ್ಟವಾಗಿ ಎದುರಿಸಿ, ಅಭಿವೃದ್ಧಿ ಯೋಜನೆಗಳನ್ನು ಮುನ್ನಡೆಸುತ್ತಿದ್ದೇವೆ ಎಂದಿದ್ದಾರೆ.

ಅಧಿಕಾರಕ್ಕೆ ಬಂದ ತಕ್ಷಣವೇ ನಮಗೆ ದೊಡ್ಡ ಪ್ರವಾಹದ ಭೀತಿ ಎದುರಾಯಿತು. ಆನಂತರ ಕಳೆದ ಎರಡು ವರ್ಷಗಳಿಂದ ಕೋವಿಡ್ ಸೋಂಕಿನ ಎರಡು ಅಲೆಗಳನ್ನು ಸಮರ್ಥವಾಗಿ ನಿಭಾಯಿಸಿದ್ದೇವೆ ಎಂದವರು ಹೇಳಿದ್ದಾರೆ.

ಆರ್ಥಿಕ ಸಂಕಷ್ಟದ ನಡುವೆಯೂ ಜನರಿಗೆ ಪರಿಹಾರ ನೀಡಲಾಗಿದೆ. ಈಗ ಲಸಿಕಾ ಅಭಿಯಾನವೂ ಯಶಸ್ವಿಯಾಗಿ ನಡೆಯುತ್ತಿವೆ ಎಂದರು.

ಇಂತಹ ಸಂದರ್ಭದಲ್ಲಿ ಪಂಚಾಯತ್ ಚುನಾವಣೆಗಳನ್ನು ಕೆಳಮಟ್ಟದಲ್ಲಿ ನಡೆಸಿ ಯಶಸ್ವಿಯಾಗಿದ್ದೇವೆ. ಸೋಂಕು ಪರಿಸ್ಥಿತಿ ನಿವಾರಣೆಗೊಂಡರೆ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ನಡೆಸುತ್ತೇವೆ. ಇದಕ್ಕೆ ನೀವು ಸಿದ್ದರಾಗಿ ಎಂದು ಕರೆ ನೀಡಿದರು.

ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ (2ನೇ ಪುಟಕ್ಕೆ)

## 80 ಪಾಸಿಟಿವ್, 316 ಗುಣಮುಖ

ದಾವಣಗೆರೆ, ಜೂ.26- ಜಿಲ್ಲೆಯಲ್ಲಿ ಶನಿವಾರ 80 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 5 ಜನರು ಮೃತಪಟ್ಟಿದ್ದಾರೆ. 316 ಜನರು ಗುಣಮುಖರಾಗಿದ್ದಾರೆಂದು ಜಿಲ್ಲಾಧಿಕಾರಿಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 38, ಹರಿಹರ 7, ಜಗಳೂರು 4, ಚನ್ನಗಿರಿ 12, ಹೊನ್ನಾಳಿ 17 ಹಾಗೂ ಹೊರ ಜಿಲ್ಲೆಯ ಇಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ.

ಜಿಲ್ಲೆಯಲ್ಲಿ 1247 ಸಕ್ರಿಯ ಪ್ರಕರಣಗಳಿದ್ದು, ಇಲ್ಲಿಯವರೆಗೆ 531 ಜನರು ಸೋಂಕಿನಿಂದ ಮೃತಪಟ್ಟಿದ್ದಾರೆ.

## ದೇಶದಲ್ಲಿ 50 ಸಾವಿರಕ್ಕೂ ಕಡಿಮೆ ಸೋಂಕು ಪತ್ತೆ

ನವದೆಹಲಿ, ಜೂ. 26 – ಒಂದೇ ದಿನ ಕಂಡು ಬರುವ ಕೊರೊನಾ ಸೋಂಕು ಪ್ರಕರಣಗಳ ಸಂಖ್ಯೆ ದೇಶದಲ್ಲಿ 50 ಸಾವಿರಕ್ಕೂ ಕಡಿಮೆಯಾಗಿದೆ. ಶನಿವಾರ 48,698 ಸೋಂಕಿತರು ಕಂಡು ಬಂದಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಇದೇ ದಿನ 1,183 ಜನರು ಸಾವನ್ನಪ್ಪಿದ್ದು, ಒಟ್ಟು ಕೊರೊನಾದಿಂದ ಮೃತರ ಸಂಖ್ಯೆ 3.94 ಲಕ್ಷಕ್ಕೆ ತಲುಪಿದೆ ಎಂದು (2ನೇ ಪುಟಕ್ಕೆ)

## ಡೆಲ್ಟಾ ಪ್ಲಸ್ : ವ್ಯಾಪಕ ಟೆಸ್ಟ್‌ಗೆ ಕೇಂದ್ರ ಸೂಚನೆ

ಬೆಂಗಳೂರು, ಜೂ. 26 – ಗುಂಪು ನಿಯಂತ್ರಣ, ವ್ಯಾಪಕ ಟೆಸ್ಟ್, ಲಸಿಕೆ ಹೆಚ್ಚಿಸುವುದೂ ಸೇರಿದಂತೆ ಹಲವಾರು ಕ್ರಮಗಳ ಮೂಲಕ ಡೆಲ್ಟಾ ಪ್ಲಸ್ ರೂಪಾಂತರಿ ಹರಡುವುದನ್ನು ತಡೆಯುವಂತೆ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರ ಪತ್ರ ಬರೆದಿದೆ.

ಈ ಬಗ್ಗೆ ರಾಜ್ಯ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರಿಗೆ ಕೇಂದ್ರ ಆರೋಗ್ಯ ಸಚಿವ ರಾಜೇಶ್ ಭೂಷಣ್ ಅವರು ಪತ್ರ ಬರೆದಿದ್ದು, ಈ ವಿಷಯಕ್ಕೆ ಸಂಬಂಧಿಸಿದಂತೆ ಆರೋಗ್ಯ ಸ್ಪಂದನೆ ಹಿಂದಿನಂತೆ ಇರಬೇಕಿದೆ. ಈ ಬಾರಿ ಹೆಚ್ಚು ಗಮನ ಹಾಗೂ ಕಠಿಣ (2ನೇ ಪುಟಕ್ಕೆ)

**ಭದ್ರಾ ಜಲಾಶಯ**

ಇಂದಿನ ಮಟ್ಟ : 153 ಅಡಿ 9 ಇಂಚು
ಒಳ ಹರಿವು: 1701 ಕ್ಯೂಸೆಕ್ಸ್
ಹೊರ ಹರಿವು : 81 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 138.7 ಅಡಿ

## ನಗರದಲ್ಲಿ ಎ-ನೆಕ್ ಪ್ರಕರಣ ಪತ್ತೆ

ದಾವಣಗೆರೆ, ಜೂ.26- ದೇಶದಲ್ಲಿ ಅಪರೂಪ ಎನ್ನುವಂತಹ ಕೋವಿಡ್ ಸೋಂಕಿತರಿಗೆ ಕಂಡು ಬರುವ ಎ- ನೆಕ್ (Acute nectrotizing encephalopathy of childhood) ಎಂಬ ಕಾಯಿಲೆ ದಾವಣಗೆರೆಯಲ್ಲಿ ಪತ್ತೆಯಾಗಿದೆ. ನಗರದ ಎಸ್.ಎಸ್. ವೈದ್ಯಕೀಯ ಸಂಶೋಧನಾ ಸಂಸ್ಥೆಯ ವೈದ್ಯರು ಈ ಪ್ರಕರಣ ಪತ್ತೆ ಹಚ್ಚಿದ್ದಾರೆ.

ಬ್ಲ್ಯಾಕ್ ಫಂಗಸ್ ರೀತಿಯಲ್ಲಿ ಒಂದು ಮಿಸ್ಸಿ ಪ್ರಕರಣ ಕಂಡು ಬಂದಿದ್ದು, ಇದರಲ್ಲಿ ಒಂದು ಎ- ನೆಕ್ ಎಂಬ ಕಾಯಿಕೆ ಪತ್ತೆ ಆಗಿದೆ. ಎ- ನೆಕ್ ಎಂಬ ಕಾಯಿಲೆ ವಯಸ್ಕರಲ್ಲಿ ಕಾಣಿಸಿಕೊಳ್ಳುತ್ತಿತ್ತು. ಆದರೆ ಇದೀಗ ಈ ಕಾಯಿಲೆ ಮಕ್ಕಳಲ್ಲಿ ಮೊದಲ ಸಲ ಕಂಡು ಬಂದಿದೆ. ಎಸ್. ಎಸ್. ವೈದ್ಯಕೀಯ ನಿರ್ದೇಶಕ ಡಾ. ನಿಜಲಿಂಗಪ್ಪ ಕಾಳಪ್ಪನವರ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರ ಸಮ್ಮುಖದಲ್ಲಿ ಮಾಹಿತಿ ನೀಡಿದ್ದು, ಇಂತಹ ಪ್ರಕರಣಗಳಲ್ಲಿ ಶೇ. 60ರಷ್ಟು ಸಾವಿನ ಸಾಧ್ಯತೆ ಇದೆ. ಇಂತಹದ್ದೇ ಒಂದು ವಯಸ್ಕರ ಪ್ರಕರಣ ದೆಹಲಿ ಏಮ್ಸ್ ನಲ್ಲಿ ಪತ್ತೆ ಆಗಿತ್ತು. ಆದರೆ ಮಗುವಿನಲ್ಲಿ ಕಂಡು ಬಂದಿರುವುದು ಇದೇ ಮೊದಲ ಪ್ರಕರಣವಾಗಿದೆ.

ವಿಜಯನಗರ ಜಿಲ್ಲೆಯ ಹೂವಿನ ಹಡಗಲಿ ಮೂಲದ 13 ವರ್ಷದ ಮಗುವಿನಲ್ಲಿ ಇಂತಹ ಲಕ್ಷಣಗಳು ಕಂಡು ಬಂದಿದ್ದು, 8 ದಿನಗಳ ಹಿಂದೆ ಎಸ್.ಎಸ್. ಹೈಟೆಕ್ ಆಸ್ಪತ್ರೆಗೆ ಈ ಮಗುವನ್ನು ದಾಖಲಿಸಲಾಗಿತ್ತು. ಮಗುವನ್ನು ಪರೀಕ್ಷೆ ಮಾಡಿದಾಗ ಮಿದುಳು ನಿಷ್ಕ್ರಿಯ ಹಂತದಲ್ಲಿತ್ತು. ವೆಂಟಲೇಟರ್‌ನಲ್ಲಿ ಮೂರು ದಿನ ಚಿಕಿತ್ಸೆ ಕೊಡಲಾಯಿತು. ಸ್ವಲ್ಪ ಚೇತರಿಕೆ ಕಂಡಿದ್ದು, ಐಸಿಯುನಲ್ಲಿ ಇಡಲಾಗಿದೆ. ಆಮ್ಲಜನಕ ನೀಡುವುದನ್ನು ಕೂಡ ನಿಲ್ಲಿಸಲಾಗಿದೆ. ಮಗುವಿಗೆ ಈಗ ಚಿಕಿತ್ಸೆ ನೀಡಲಾಗುತ್ತಿದೆ. ಇನ್ನು ಇದು ಕೊರೊನಾ ಸೋಂಕು ತಗುಲಿ ಗುಣಮುಖರಾದ ಮಕ್ಕಳಿಗೆ ಬರುವ ಕಾಯಿಲೆ ಆಗಿದ್ದು, ಈ ಮಗು ಈಗ ಚೇತರಿಸಿಕೊಳ್ಳುತ್ತಿದೆ. ಇದಕ್ಕೆ ಹಿಮೋಗ್ಲೋಬಿನ್ ಔಷಧಿ ನೀಡಿದರೆ ಚೇತರಿಕೆ ಕಂಡು ಬರುತ್ತಿದೆ. ಆದ್ರೆ ಹಿಮೋಗ್ಲೋಬಿನ್ ಔಷಧಿ ದುಬಾರಿಯಾಗಿದ್ದು, 10 ಕೆಜಿ ಮಗುವಿಗೆ ಅಂದಾಜು ಕನಿಷ್ಟ 75 ಸಾವಿರ ರೂ. ಈ ಹಿಮೋಗ್ಲೋಬಿನ್ ಔಷಧಿಗೆ ವೆಚ್ಚವಾಗಲಿದೆ. ಈ (3ನೇ ಪುಟಕ್ಕೆ)

## ನೀರಗಂಟಿ ಹುದ್ದೆಗೆ 1.60 ಲಕ್ಷ ರೂ. ಲಂಚ ಕೇಳಿದ ಗ್ರಾ.ಪಂ ಕಾರ್ಯದರ್ಶಿ

**ಸಾಮಾಜಿಕ ಜಾಲತಾಣದಲ್ಲಿ ಆಡಿಯೋ ವೈರಲ್**

ಜಗಳೂರು, ಜೂ.26- ದಿದ್ದಿಗಿ ಗ್ರಾಮ ಪಂಚಾಯ್ತಿ ಪ್ರಭಾರಿ ಅಭಿವೃದ್ಧಿ ಅಧಿಕಾರಿಯಾಗಿರುವ ಗ್ರೇಡ್-2 ಕಾರ್ಯದರ್ಶಿ ಅವರು ನೀರಗಂಟಿ ಹುದ್ದೆಗೆ ಲಕ್ಷಗಟ್ಟಲೆ ಹಣ ಕೇಳುತ್ತಿರುವ ಆಡಿಯೋ ಸಾಮಾಜಿಕ ಜಾ ಲತಾಣದಲ್ಲಿ ಹರಿದಾಡುತ್ತಿದೆ.

ದಿದ್ದಿಗಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ನೀರಗಂಟಿ ಹುದ್ದೆ ಖಾಲಿ ಇದ್ದು, 1.60 ಲಕ್ಷ ರೂ. ಕೊಟ್ಟಲ್ಲಿ ಕೆಲಸ ಖಾಯಂಗೊಳಿಸಿ, ಜಿಲ್ಲಾ ಪಂಚಾಯ್ತಿ ಕಚೇರಿಯಿಂದ ಆದೇಶ ಪತ್ರ ಕೊಡಿಸುವುದಾಗಿ ಕಾರ್ಯದರ್ಶಿ ಸಿ.ಹೆಚ್. ಶ್ರೀನಿವಾಸ್ ಹುದ್ದೆಯ ಆಕಾಂಕ್ಷಿ ಅಂಜಿನಪ್ಪ ಎಂಬುವವರೊಂದಿಗೆ ಮಾತನಾಡಿದ್ದಾರೆ ಎನ್ನಲಾದ 10 ನಿಮಿಷದ ಆಡಿಯೋ ಜಿಲ್ಲೆಯಾದ್ಯಂತ ವೈರಲ್ ಆಗಿದೆ.

ಗ್ರಾಮ ಪಂಚಾಯ್ತಿ ಸದಸ್ಯ ಹಾಗೂ ಅಂಜಿನಪ್ಪ ಅವರೊಂದಿಗೆ ಕಾನ್ಫರೆನ್ಸ್ ಕರೆಯಲ್ಲಿ ಕಾರ್ಯದರ್ಶಿ ಶ್ರೀನಿವಾಸ್ ಮಾತನಾಡಿದ್ದು, ನೀರಗಂಟಿ ಹುದ್ದೆಗೆ 1.60 ಲಕ್ಷ ರೂ. ಹಣ ಕೊಡಬೇಕು. ಇದರಲ್ಲಿ ಜಿಲ್ಲಾ ಪಂಚಾಯ್ತಿ ಹಾಗೂ ತಾಲ್ಲೂಕು (2ನೇ ಪುಟಕ್ಕೆ)

### ಕಾರ್ಯದರ್ಶಿ ವರ್ಗಾವಣೆಗೆ ಶಾಸಕ ಎಸ್‌ವಿಆರ್ ಕ್ರಮ

**ತಾಲ್ಲೂಕು ಆಡಳಿತದಲ್ಲಿ ಭ್ರಷ್ಟಾಚಾರಕ್ಕೆ ಅವಕಾಶ ನೀಡುವುದಿಲ್ಲ. ದಿದ್ದಿಗಿ ಪಂಚಾಯ್ತಿ ಕಾರ್ಯದರ್ಶಿ ಶ್ರೀನಿವಾಸ್ ವಿರುದ್ಧದ ಆಡಿಯೋ ಆರೋಪಗಳ ಹಿನ್ನಲೆ ಯಲ್ಲಿ ತಕ್ಷಣವೇ ಅವರನ್ನು ಸೇವೆಯಿಂದ ತೆರವು ಗೊಳಿಸಿ, ಬೇರೆಡೆಗೆ ವರ್ಗಾವಣೆ ಮಾಡಿ ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ಎಸ್.ವಿ. ರಾಮಚಂದ್ರ ತಿಳಿಸಿದ್ದಾರೆ.**

## ಹರಪನಹಳ್ಳಿಯಲ್ಲಿ ಬ್ಲಡ್ ಬ್ಯಾಂಕ್



**ಬ್ಲಡ್ ಬ್ಯಾಂಕ್ ಸ್ಥಾಪನೆಗೆ ಅಗತ್ಯ ಕ್ರಮ**

ಹರಪನಹಳ್ಳಿ, ಜೂ.26- ತಾಲ್ಲೂಕಿನ ಜನರಿಗೆ ಅನುಕೂಲ ವಾಗಲಿ ಎಂಬ ಉದ್ದೇಶದಿಂದ ಬ್ಲಡ್ ಬ್ಯಾಂಕ್ ಸ್ಥಾಪನೆಗೆ ಯೋಚಿಸಲಾಗಿದೆ ಎಂದು ಶಾಸಕ ಜಿ.ಕರುಣಾಕರ ರೆಡ್ಡಿ ಹೇಳಿದರು.

ಪಟ್ಟಣದ ಎಡಿಬಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಎಡಿಬಿ ಕಾಲೇಜು, ಭಾರತೀಯ ವೈದ್ಯಕೀಯ ಸಂಘಗಳ ಸಂಯುಕ್ತಾಶ್ರ ಯದಲ್ಲಿ ಆಯೋಜಿಸಿದ್ದ ವಿಶ್ವ ರಕ್ತದಾನಿಗಳ ದಿನಾಚರಣೆ ಹಾಗೂ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಕ್ತ ಕೊಡುವುದರಿಂದ ಆರೋಗ್ಯ ಉತ್ತಮಗೊಳ್ಳುತ್ತದೆ. ದೇಶದ 135 ಕೋಟಿ ಜನಸಂಖ್ಯೆಗೆ 1.35 ಕೋಟಿ ಯೂನಿಟ್ ರಕ್ತ ಸಂಗ್ರಹವಿರಬೇಕು. ಆದರೆ 2 ಲಕ್ಷ ಯೂನಿಟ್ ಕೊರತೆ ಬೀಳುತ್ತಿದೆ ಎಂದ ಅವರು, ಕೋವಿಡ್ ಬಂದಾಗಿನಿಂದ ರಕ್ತದಾನ ಮಾಡುವವರ ಸಂಖ್ಯೆ ಕಡಿಮೆಯಾಗಿದೆ ಎಂದ ಅವರು ಪ್ರತಿಯೊಬ್ಬರೂ ರಕ್ತವನ್ನು ದಾನ ಮಾಡಿ ಎಂದು ಮನವಿ ಮಾಡಿದರು.

ಭಾರತೀಯ ವೈದ್ಯಕೀಯ ಸಂಘದ ತಾಲ್ಲೂಕು ಅಧ್ಯಕ್ಷ ಡಾ. ಮಹೇಶ್ ಮಾತನಾಡಿ, ರಕ್ತದಾನ ಸರ್ವಶ್ರೇಷ್ಠ ದಾನ. ಒಂದು ಬಾಟಲ್ ರಕ್ತ ಮೂರು ಜನರನ್ನು ಉಳಿಸುತ್ತದೆ. ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ರಕ್ತ ದಾನ ಮಾಡಲು ಮುಂದೆ ಬರಬೇಕು. ಆದಷ್ಟು ಬೇಗ ಹರಪನಹಳ್ಳಿಯಲ್ಲಿ ಬ್ಲಡ್ ಬ್ಯಾಂಕ್ ಸ್ಥಾಪನೆಯಾಗಲಿ ಎಂದು ಆಶಿಸಿದರು.

ಇದೇ ವೇಳೆ ಹೆಚ್ಚು ಬಾರಿ ರಕ್ತ ದಾನ ಮಾಡಿದ ವ್ಯಕ್ತಿಗಳನ್ನು ಸನ್ಮಾನಿಸಿ (2ನೇ ಪುಟಕ್ಕೆ)

## ಸ್ಮಾರ್ಟ್ ಸಿಟಿ : ರಾಜ್ಯದ 2 ಯೋಜನೆಗಳಿಗೆ ಕೇಂದ್ರದ ಪುರಸ್ಕಾರ

ಬೆಂಗಳೂರು, ಜೂ. 26 - ಭಾರತದ ವಿವಿಧೆಡೆಗಳಲ್ಲಿ ನಡೆಯುತ್ತಿರುವ ಸ್ಮಾರ್ಟ್ ಸಿಟಿ ಯೋಜನೆಗಳ 6ನೇ ವಾರ್ಷಿಕೋತ್ಸವದ ನಿಮಿತ್ತ ನಡೆದ ಅಂತರ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಕರ್ನಾಟಕ ರಾಜ್ಯದ 2 ಸ್ಮಾರ್ಟ್ ಸಿಟಿ ಯೋಜನೆಗಳಿಗೆ ಕೇಂದ್ರ ಸರ್ಕಾರದ ಪುರಸ್ಕಾರ ಲಭಿಸಿದೆ.

ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ವತಿಯಿಂದ ರಾಷ್ಟ್ರ ಮಟ್ಟದಲ್ಲಿ ನಡೆದ ಈ ವಿವಿಧ ಸ್ತರದ ಸ್ಪರ್ಧೆಗಳಲ್ಲಿ ತುಮಕೂರು ಸ್ಮಾರ್ಟ್ ಸಿಟಿಯ ಡಿಜಿಟಲ್ ಗ್ರಂಥಾಲಯ ಯೋಜನೆಗೆ ರಾಷ್ಟ್ರ ಮಟ್ಟದಲ್ಲಿ 3ನೇ ಸ್ಥಾನ ದೊರಕಿದೆ.

ಕೋವಿಡ್ ತುರ್ತು (2ನೇ ಪುಟಕ್ಕೆ)




# ಕೂಡ್ಲಿಗಿ : ಲಸಿಕೆ ಹಾಕಿಸಿಕೊಳ್ಳಲು ಹಿಂದೇಟು ಹಾಕಿದವರಿಗೆ ಜಾಗೃತಿ



ಕೂಡ್ಲಿಗಿ, ಜೂ.26- ತಾಲ್ಲೂಕಿನ ಹುಡೇಂ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ತಾಯಕನಹಳ್ಳಿ, ಹೊಸೂರು, ಚೌಟಯ್ಯನಹಟ್ಟಿ, ಸುಟ್ಟಕನಾರಹಟ್ಟಿ, ನಡುವಲಹಟ್ಟಿ ಗ್ರಾಮದಲ್ಲಿ 18 ವರ್ಷ ಮೇಲ್ಪಟ್ಟವರಿಗೆ ನೀಡುತ್ತಿರುವ ವ್ಯಾಕ್ಸಿನ್ ಪಡೆಯಲು ಹಳ್ಳಿಯಲ್ಲಿ ವೃದ್ಧರು ಹಿಂದೇಟು ಹಾಕುತ್ತಿದ್ದಾರೆ.

ಹುಡೇಂ ಗ್ರಾಮ ಪಂಚಾಯ್ತಿಯ 6 ಹಳ್ಳಿಯ 18 ವರ್ಷ ಮೇಲ್ಪಟ್ಟವರ ಸಂಖ್ಯೆ 3,928 ಜನರಿದ್ದಾರೆ ಎಂದು ಅಂದಾಜಿಸಲಾಗಿದ್ದು, ಈವರೆಗೆ 175 ಜನರು ಮಾತ್ರ ಲಸಿಕೆ ಪಡೆದುಕೊಂಡಿದ್ದಾರೆ. ಗ್ರಾಮ ಪಂಚಾಯ್ತಿ ಸಿಬ್ಬಂದಿಗಳು ಹಾಗೂ ಆಶಾ ಕಾರ್ಯಕರ್ತರು ಮತ್ತು ಆರೋಗ್ಯ ಸಿಬ್ಬಂದಿಯವರು ತಾಯಕನಹಳ್ಳಿಯಲ್ಲಿ ಮನೆ ಮನೆಗೆ ತೆರಳಿ ಲಸಿಕೆಯಿಂದ ಯಾವುದೇ ರೀತಿ ಅಡ್ಡಪರಿಣಾಮ ಉಂಟಾಗುವುದಿಲ್ಲ ಎನ್ನುವುದನ್ನು ಹಲವಾರು ಬಾರಿ ಸ್ಪಷ್ಟಪಡಿಸಿದ್ದಾರೆ.

ಜಾಗೃತಿ ಕಾರ್ಯಕ್ರಮದಲ್ಲಿ ಅಭಿವೃದ್ಧಿ ಅಧಿಕಾರಿಗಳಾದ ಮಾರೇಶ್, ಉಪಾಧ್ಯಕ್ಷ ಕೆ.ಎನ್. ರಾಘವೇಂದ್ರ, ಹುಡೇಂ ಗ್ರಾ.ಪಂ. ಸದಸ್ಯರಾದ ಸುಂದರಮ್ಮ ಮಲ್ಲಿಕಾರ್ಜುನ್, ಗದ್ದಿಸ್ವಾಮಿ, ಆರೋಗ್ಯ ಸಹಾಯಕರಾದ ಪ್ರೇಮ, ಫಾತಿಮಾ, ರಾಜಮ್ಮ ಶಿವಪ್ರಕಾಶ್ ಹಾಗೂ ಆಶಾ ಕಾರ್ಯಕರ್ತರಾದ ಲಕ್ಷ್ಮಿದೇವಿ, ಚೌಡಮ್ಮ, ವಿನೋದ, ನಾಗವೇಣಿ ಮತ್ತಿತರರು ಉಪಸ್ಥಿತರಿದ್ದರು.

# ಯುವ ಪೀಳಿಗೆಯಿಂದ ಅಪರಾಧ ಚಟುವಟಿಕೆ ಹೆಚ್ಚಳ

ಹೊನ್ನಾಳಿ, ಜೂ.26- ಮಾದಕ ವ್ಯಸನದಿಂದ ಯುವಜನತೆ ಹಾಳಾಗುತ್ತಿದ್ದು, ಪೋಷಕರು ತಮ್ಮ ಮಕ್ಕಳ ಚಲನ ವಲನದ ಬಗ್ಗೆ ವಿಶೇಷ ನಿಗಾ ವಹಿಸಬೇಕು ಎಂದು ಪಿಎಸ್ಐ ಬಸನಗೌಡ ಬಿರಾದಾರ ತಿಳಿಸಿದರು.

ಪಟ್ಟಣದ ವೀರ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಹೊನ್ನಾಳಿ ಪೊಲೀಸ್ ಠಾಣೆ ವತಿಯಿಂದ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಮಾದಕ ವಸ್ತು ಮತ್ತು ಅಕ್ರಮ ಕಳ್ಳ ಸಾಗಾಣಿಕೆ ವಿರೋಧಿ ದಿನಾಚರಣೆಯನ್ನುದ್ದೇಶಿಸಿ ಅವರು ಮಾತನಾಡಿದರು.

ಯುವ ಪೀಳಿಗೆ ದೇಶದ ಆಸ್ತಿ. ಸದೃಢ ಯುವ ಪೀಳಿಗೆಯಿಂದ ದೇಶದ ಅಭಿವೃದ್ಧಿ ಸಾಧ್ಯ. ಆದರೆ ಇಂದಿನ ದಿನಗಳಲ್ಲಿ ಯುವ ಪೀಳಿಗೆ ದುಶ್ಚಟಗಳ ದಾಸರಾಗಿ ತಮ್ಮ ಸುಂದರ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದು, ಇದು ಆತಂಕಕಾರಿ ವಿಷಯವಾಗಿದೆ ಎಂದರು.

ಶಾಲಾ-ಕಾಲೇಜುಗಳು, ಸಂಘ-ಸಂಸ್ಥೆಗಳು, ಮಠ-ಮಾನ್ಯಗಳು ದೇಶದ ಯುವಕರಲ್ಲಿ ಮಾದಕ ವಸ್ತುಗಳ ಬಗ್ಗೆ ಜಾಗೃತಿ ಮೂಡಿಸಬೇಕು. ಸಮಾಜಕ್ಕೆ ಮಾರಕವಾಗಿರುವ ವ್ಯಸನವನ್ನು ಬುಡಸಮೇತ ಕಿತ್ತೊಗೆಯಲು ಎಲ್ಲರೂ ಮಾದಕ ವಸ್ತುಗಳ ವಿರುದ್ಧ ಹೋರಾಡಲು ಮುಂದಾಗಬೇಕೆಂದು ಕರೆ ನೀಡಿದರು. ಯುವ ಪೀಳಿಗೆ ದುಶ್ಚಟಗಳ ಕಡೆ ಗಮನಹರಿಸದೇ ಸಮಾಜಮುಖಿ ಕೆಲಸಗಳತ್ತ ತೊಡಗಿಕೊಳ್ಳಬೇಕು. ಜೊತೆಗೆ ಕೊರೊನಾ ಸೋಂಕಿನ ವಿರುದ್ಧ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ಕೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ಪೋಷಕರು ಮಕ್ಕಳಲ್ಲಿ ದೈಹಿಕ ಹಾಗೂ ಮಾನಸಿಕವಾಗಿ ಆಗುತ್ತಿರುವ ಬದಲಾವಣೆ ಯತ್ತ ಗಮನಹರಿಸಬೇಕು.ಶಾಲಾ-ಕಾಲೇಜು ಗಳಲ್ಲಿ ಮಕ್ಕಳ ನಡವಳಿಕೆಯ ಬಗ್ಗೆ ಅವರ ಸ್ನೇಹಿತರ ಮತ್ತು ಶೈಕ್ಷಣಿಕ ಸಂಸ್ಥೆಗಳಿಂದ ನಿರಂತರ ಮಾಹಿತಿ ಪಡೆಯುತ್ತಿರಬೇಕು ಎಂದು ತಿಳಿಸಿದರು.

ಲಾಕ್‌ಡೌನ್ ತೆರವಿನಿಂದ ಒತ್ತಡದಿಂದ ಹಾಗೂ ವಿವಿಧ ಕಾರಣಗಳಿಂದ ವ್ಯಸನಿಗಳ ಸಂಖ್ಯೆ ಹೆಚ್ಚಾಗಬಹುದು. ಇದನ್ನು ವ್ಯಸನಿಗಳ ಕುಟುಂಬದ ಸದಸ್ಯರು ವಿಶೇಷ ನಿಗಾವಹಿಸಿ ವ್ಯಸನಿಗಳ ಮನವೊಲಿಸಿ ನಿಯಂತ್ರಣಕ್ಕೆ ತರಲು ಮುಂದಾಗಬೇಕೆಂದು ಕರೆ ನೀಡಿದರು.

ಡ್ರಗ್ಸ್ ಮಾರಾಟ ದಂಧೆಕೋರರು ಸಾಮಾಜಿಕ ಜಾಲತಾಣಗಳಲ್ಲೇ ಡೀಲ್ ಕುದುರಿಸಿಕೊಂಡು ಮಾದಕ ವಸ್ತುಗಳನ್ನು ಮನೆ ಬಾಗಿಲಿಗೇ ಮುಟ್ಟಿಸುವ ಷಡ್ಯಂತ್ರ ರಚಿಸಿದ್ದು, ಇದರ ಬಗ್ಗೆ ಪೋಷಕರು ಎಚ್ಚರ ವಹಿಸಬೇಕು ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರೊಬೇಷನರಿ ಪಿಎಸ್ಐ ಕಾಂತರಾಜ್, ಎಎಸ್ಐ ಮಾಲತೇಶ್, ಆಟೋ ಚಾಲಕರು ಇನ್ನಿತರರಿದ್ದರು.



**ಹೊನ್ನಾಳಿ ಪಿಎಸ್ಐ ಬಸನಗೌಡ ಬಿರಾದಾರ ವ್ಯಾಕುಲತೆ**

## ಬ್ಲಡ್ ಬ್ಯಾಂಕ್ ಸ್ಥಾಪನೆಗೆ ಚಿಂತನೆ



**(1ನೇ ಪುಟದಿಂದ)** ಗೌರವಿಸಲಾಯಿತು. ಪುರಸಭಾ ಅಧ್ಯಕ್ಷ ಮಂಜುನಾಥ ಇಜಂತಕರ್ , ವೈದ್ಯಾಧಿಕಾರಿ ಪಿ.ಕೆ. ವೆಂಕಟೇಶ್, ವೃತ್ತ ನಿರೀಕ್ಷಕ ನಾಗರಾಜ ಕಮ್ಮಾರ, ಎಡಿಬಿ ಕಾಲೇಜು ಅಧ್ಯಕ್ಷ ಅಕ್ಕಿ ಶಿವಕುಮಾರ, ಪ್ರಾಚಾರ್ಯ ಡಾ. ಮಲ್ಲಿಕಾರ್ಜುನಗೌಡ, ಗಿರೀಶ್, ಭುವನೇಶ್ವರಿ ಹಾಜರಿದ್ದರು.

## ಅಸಂಘಟಿತ ಕಾರ್ಮಿಕರಿಗೆ ಪರಿಹಾರ

ದಾವಣಗೆರೆ, ಜೂ.26- ಕೋವಿಡ್ ಲಾಕ್‌ಡೌನ್ ಜಾರಿಗೊಳಿಸಿದ ಪರಿಣಾಮ ಆರ್ಥಿಕ ನಷ್ಟ ಅನುಭವಿಸಿದ ಅಸಂಘಟಿತ ಕಾರ್ಮಿಕರಿಗೆ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸಿದ್ದು, ಸಂಬಂಧಪಟ್ಟ ವಲಯದ ಕಾರ್ಮಿಕರು ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಜುಲೈ 31 ಕೊನೆಯ ದಿನವಾಗಿದೆ. ಅರ್ಜಿ ಸಲ್ಲಿಕೆ ಇನ್ನಿತರೆ ಸಹಾಯಕ್ಕೆ ಕಾರ್ಮಿಕ ಸಹಾಯವಾಣಿ ನೆರವಾಗಲಿದೆ. ಅರ್ಜಿ ಸಲ್ಲಿಸಲು ಹಾಗೂ ನೆರವು ಪಡೆಯಲು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸೇವಾಕೇಂದ್ರಗಳು, ವಾರ್ಡ್ ಮಟ್ಟದ ಸೇವಾಕೇಂದ್ರಗಳು, ಸಾಮಾನ್ಯ ಸೇವಾಕೇಂದ್ರಗಳು, ಕಾರ್ಮಿಕ ಸೇವಾ ಕೇಂದ್ರಗಳನ್ನು ಅಥವಾ ಕಾರ್ಮಿಕ ನಿರೀಕ್ಷಕರು, ಹಿರಿಯ ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಅಧಿಕಾರಿಗಳ ಕಚೇರಿಯನ್ನು ಭೇಟಿ ಮಾಡುವುದು.

ಮಾಹಿತಿಗೆ ಕಾರ್ಮಿಕ ಸಹಾಯವಾಣಿ: 155214 ಅಥವಾ ಸೇವಾ ಸಿಂಧು ಸಂಸ್ಥೆಯ 8088304855/6361799796 ಸಂಪರ್ಕಿಸಲು ತಿಳಿಸಲಾಗಿದೆ.

## ರಾಜ್ಯ ಮಟ್ಟದ ಗೃಹಿಣಿ ಫೋಟೋ ಸ್ಪರ್ಧೆ

ದಾವಣಗೆರೆ, ಜೂ. 26- ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆಯಾದ ಕಲಾಕುಂಚ ಮಹಿಳಾ ವಿಭಾಗದ ಆಶ್ರಯದಲ್ಲಿ ರಾಜ್ಯ ಮಟ್ಟದ ಉಚಿತ 'ಕರ್ನಾಟಕ ಆಕರ್ಷಕ ಗೃಹಿಣಿ ಫೋಟೋ ಸ್ಪರ್ಧೆ'ಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷರಾದ ಹೇಮಾ ಶಾಂತಪ್ಪ ಪೂಜಾರಿ, ಪ್ರಧಾನ ಕಾರ್ಯದರ್ಶಿ ಡಾ. ಶೋಭಾ ಚಪ್ಪರದಹಳ್ಳಿಮಠ ತಿಳಿಸಿದ್ದಾರೆ.

ಸ್ಪರ್ಧಿಗಳು ತಮ್ಮ ತಮ್ಮ ಮನೆಯಲ್ಲೇ ನಮ್ಮ ಸಾಂಪ್ರದಾಯಿಕ ಸಂಸ್ಕೃತಿಯ ಆಕರ್ಷಕ ಉಡುಗೆ ತೊಡುಗೆಯೊಂದಿಗೆ ಮೊಬೈಲ್‌ನಲ್ಲಿ ಫೋಟೋ ತೆಗೆದು ಒಂದು ಫೋಟೋ ಮಾತ್ರ 9513189196 ಈ ವ್ಯಾಟ್ಸಾಪ್ ಬರುವ ಜುಲೈ 5 ರೊಳಗೆ ಕಳಿಸಬೇಕು ಎಂದು ಸಂಸ್ಥೆಯ ಖಜಾಂಚಿ ಶ್ರೀಮತಿ ಗಿರಿಜಮ್ಮ ನಾಗರಾಜ್ ಮತ್ತು ಸಂಸ್ಥೆಯ ಸಂಸ್ಥಾಪಕರಾದ ಶ್ರೀಮತಿ ಜ್ಯೋತಿ ಗಣೇಶ್ ಶೆಣೈ (9901122728) ತಿಳಿಸಿದ್ದಾರೆ.

## ಕಾವೇರಿಯಿಂದ ರುದ್ರಭೂಮಿ ಸೇವಕರಿಗೆ ದಿನಸಿ ಸಾಮಗ್ರಿ ವಿತರಣೆ

ದಾವಣಗೆರೆ, ಜೂ.26- ನಗರದ ಕಾವೇರಿ ಸಾಂಸ್ಕೃತಿಕ ವೇದಿಕೆಯಿಂದ ಬಡವರು, ಅಂಗವಿಕಲರು ಹಾಗೂ ರುದ್ರಭೂಮಿಯಲ್ಲಿ ಶವ ಸಂಸ್ಕಾರ ಮಾಡುವ ಕರ್ಮಚಾರಿಗಳ ಕುಟುಂಬಗಳಿಗೆ ಆಹಾರ ಸಾಮಗ್ರಿಗಳನ್ನು ವಿತರಿಸಲಾಯಿತು

ವೇದಿಕೆ ಅಧ್ಯಕ್ಷ ಸಾಲಿಗ್ರಾಮ ಗಣೇಶ್ ಶೆಣೈ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನ ಕಾರ್ಯದರ್ಶಿ ಜಿ.ವಿ. ತಿಪ್ಪೇಸ್ವಾಮಿ, ಸದಸ್ಯರಾದ ಸವಿತಾ ಶ್ರೀನಿಧಿ, ಜ್ಯೋತಿ ಗಣೇಶ್ ಶೆಣೈ, ಸುಜಾತ ತಿಪ್ಪೇಸ್ವಾಮಿ, ಮನೋಜ್, ಸುನೀಲ್ ಇನ್ನಿತರರಿದ್ದರು.

# ದಲಿತರ ಬೇಗುದಿಯನ್ನು ಆಡಳಿತಗಾರರ ಗಮನಕ್ಕೆ ತಂದವರು ಡಾ. ಸಿದ್ದಲಿಂಗಯ್ಯ



ಹರಿಹರ, ಜೂ.26- ಕವಿತೆಗಳ ಮೂಲಕ ದಲಿತ ಬೇಗುದಿಯನ್ನು ಆಡಳಿತಗಾರರ ಗಮನಕ್ಕೆ ತಂದ ಕೀರ್ತಿ ಕವಿ ಡಾ.ಸಿದ್ದಲಿಂಗಯ್ಯನವರಿಗೆ ಸಲ್ಲುತ್ತದೆ ಎಂದು ಮಾಜಿ ಶಾಸಕ ಬಿ.ಪಿ.ಹರೀಶ್ ಮೆಚ್ಚುಗೆ ವ್ಯಕ್ತಪಡಿಸಿದರು.

ದಸಂಸ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ತಾಲ್ಲೂಕು ಸಮಿತಿಯಿಂದ ನಗರದಲ್ಲಿ ಇಂದು ಆಯೋಜಿಸಿದ್ದ ಡಾ.ಸಿದ್ದಲಿಂಗಯ್ಯನವರಿಗೆ ನುಡಿನಮನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ತಮ್ಮ ಜನರ ಕಷ್ಟಗಳ ನಿವಾರಣೆಗೆ ಶಕ್ತಿ ಮೀರಿ ಪ್ರಯತ್ನಿಸಿದ ಸಿದ್ದಲಿಂಗಯ್ಯ ಅವರ ಸರಳತೆ, ಪ್ರಾಮಾಣಿಕತೆ ಹಾಗೂ ಸಮಾಜ ಸುಧಾರಣೆಯ ಹಂಬಲವನ್ನು ಪರಿಗಣಿಸಿ, ಎರಡು ಅವಧಿಗೆ ವಿಧಾನ ಪರಿಷತ್ ಸದಸ್ಯರಾಗಿ ನೇಮಕಗೊಂಡಿದ್ದರು. ಅವರು ಯಾರೊಂದಿಗೂ ಕಠೋರವಾಗಿ ಮಾತನಾಡಿಲ್ಲ. ಎಲ್ಲಾ ವರ್ಗದವರನ್ನೂ ಅಪ್ಪಿ, ಒಪ್ಪಿ ನಡೆಯುವ ವ್ಯಕ್ತಿತ್ವ ಅವರದ್ದಾಗಿತ್ತು ಎಂದು ಹರೀಶ್ ಸ್ಮರಿಸಿದರು.

ದಸಂಸ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಮಾತನಾಡಿ, ಪ್ರೊ.ಬಿ. ಕೃಷ್ಣಪ್ಪರಂತೆಯೇ ಕಾಲೇಜು ಉಪನ್ಯಾಸಕರಾಗಿ ರಾಜ್ಯದಲ್ಲಿ ದಲಿತ ಸಂಘಟನೆಗೆ ಪ್ರೇರಣಾ ಶಕ್ತಿಯಾಗಿ ಡಾ.ಸಿದ್ದಲಿಂಗಯ್ಯನವರು ಶ್ರಮಿಸಿದರು. ಅವರ ಸಾಹಿತ್ಯ, ನಾಟಕ, ಪ್ರಬಂಧ, ವಿಮರ್ಶೆ, ಸಂಶೋಧನೆ, ಕವಿತೆ, ಆತ್ಮಕಥನ, ಹಾಡುಗಳು ದಲಿತ ಪರ ಕಾರ್ಯಕರ್ತರಿಗೆ ಟಾನಿಕ್ ರೀತಿಯಲ್ಲಿ ಕೆಲಸ ಮಾಡಿದವು ಎಂದರು.

ನಿವೃತ್ತ ಎಸ್ಪಿ ರುದ್ರಮುನಿ ಮಾತನಾಡಿ, ವಿದ್ಯಾರ್ಥಿ ದೆಸೆಯಲ್ಲೇ ಭಾಷಣಕಾರರಾಗಿ ಗುರುತಿಸಿಕೊಂಡು, ಡಾ.ಅಂಬೇಡ್ಕರ್, ಪೆರಿಯಾರ್, ವಿಚಾರ ಧಾರೆಗಳಿಂದ ಆಕರ್ಷಿತರಾದ ಸಿದ್ದಲಿಂಗಯ್ಯನವರು, ನಾಡಿನ ದಲಿತ ಚೇತನವಾಗಿದ್ದರು ಎಂದರು.

ಲೇಖಕ ಜೆ. ಕಲೀಂ ಬಾಷಾ ಮಾತನಾಡಿ, ರಾಜ್ಯದಲ್ಲಿ ಬಂಡಾಯ ಸಾಹಿತ್ಯ ಹಾಗೂ ದಸಂಸ ಸ್ಥಾಪನೆಯ ಹಿಂದೆ ಸಿದ್ದಲಿಂಗಯ್ಯನವರು ಸಾಕಷ್ಟು ಶ್ರಮಿಸಿದ್ದರು. ಈ ಎರಡೂ ಸಂಘಟನೆಗಳು ರಾಜ್ಯದಲ್ಲಿ ದಲಿತರ ಪರವಾಗಿ ಹೊಸ ಮನ್ವಂತರ ತೆರೆದವು ಎಂದು ಹೇಳಿದರು.

ನಿವೃತ್ತ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಜಗನ್ನಾಥ್ ಮಾತನಾಡಿ, ದಲಿತ ಹೋರಾಟ ಮತ್ತು ಸಾಮಾಜಿಕ ಸಮಾನತೆಯ ಕಿಚ್ಚು ಅವರ ಕಾವ್ಯ ಸಾಹಿತ್ಯದಲ್ಲಿ ಕಾಣುತ್ತಿತ್ತು. ಅವರೊಬ್ಬ ಸಾಮಾಜಿಕ ಚಿಕಿತ್ಸಕರಾಗಿ ನಮ್ಮ ನಡುವೆ ಸದಾ ಸ್ಮರಣೆಯಲ್ಲಿರುತ್ತಾರೆಂದರು.

ಕಸಾಪ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ ಮಾತನಾಡಿ, ಪಂಪ, ನೃಪತುಂಗ, ನಾಡೋಜ, ರಾಜ್ಯ ಚಲನಚಿತ್ರ, ರಾಜ್ಯೋತ್ಸವ ಪ್ರಶಸ್ತಿಯನ್ನು ಪಡೆದು, 2015ರಲ್ಲಿ ಶ್ರವಣಬೆಳಗೊಳದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದು ಸಿದ್ದಲಿಂಗಯ್ಯನವರ ಸಾಧನೆಗೆ ಸಾಕ್ಷಿಯಾಗಿದೆ ಎಂದರು.

ಎ.ಡಿ.ಕೊಟ್ರಬಸಪ್ಪ, ಬಿ.ಮಗ್ದುಮ್, ಹುಲಿಕಟ್ಟಿ ಚನ್ನಪ್ಪ, ಗ್ರಾ.ಪಂ ಸದಸ್ಯ ಮಂಜಪ್ಪ, ವೈ.ಬಿ.ಪ್ರಭಾಕರ್, ಮಾರ್ಸ್ ರವಿ ಕುಮಾರ್, ಕೊಟ್ರಪ್ಪ ಪೂಜಾರ್, ಜಿಗಳಿ ಪ್ರದೀಪ್ ಕುಮಾರ್, ಎಚ್.ಜಿ.ಸುಭಾಷ್, ಕೆ. ಚನ್ನಪ್ಪ, ಎ.ಕೆ. ಭೂಮೇಶ್, ಪ್ರತೀಶ್ ಇತರರಿದ್ದರು.

## ಮಲೇಬೆನ್ನೂರು : ಪಿಡಬ್ಲ್ಯೂಡಿ ಶಾಲೆಯಲ್ಲಿ ಆಂಗ್ಲ ಮಾಧ್ಯಮ ಶಿಕ್ಷಣಕ್ಕೆ ಅನುಮೋದನೆ

ಮಲೇಬೆನ್ನೂರು, ಜೂ.26- ಇಲ್ಲಿನ ಪಿಡಬ್ಲ್ಯೂಡಿ ಕಾಲೋನಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 1ನೇ ತರಗತಿಯಿಂದ ಆಂಗ್ಲ ಮಾಧ್ಯಮ ಶಿಕ್ಷಣಕ್ಕೆ ಸರ್ಕಾರ ಅನುಮೋದನೆ ನೀಡಿದೆ. ಆಂಗ್ಲ ಮಾಧ್ಯಮಕ್ಕೆ ಹಾಜರಾಗುವ ಮಕ್ಕಳಿಗೆ ಉಚಿತ ಶಿಕ್ಷಣ, ಪಠ್ಯಪುಸ್ತಕ, ಸಮವಸ್ತ್ರ, ಶಿಷ್ಯವೇತನ, ಕ್ಷೀರಭಾಗ್ಯ, ಬಿಸಿಯೂಟ ಯೋಜನೆ, ಆರೋಗ್ಯ ತಪಾಸಣೆ ಸೌಲಭ್ಯಗಳು ದೊರೆಯಲಿವೆ. ಈ ಶಾಲೆಯಲ್ಲಿ ಈಗಾಗಲೇ 6 ಮತ್ತು 7ನೇ ತರಗತಿಗಳಿಗೂ ಆಂಗ್ಲ ಮಾಧ್ಯಮ ಮತ್ತು ಕನ್ನಡ ಮಾಧ್ಯಮ ಸೌಲಭ್ಯ ಇದೆ ಎಂದು ಎಸ್‌ಡಿಎಂಸಿ ಅಧ್ಯಕ್ಷ ಬೆಣ್ಣೆಹಳ್ಳಿ ಬಸವರಾಜ್ ತಿಳಿಸಿದ್ದಾರೆ.

## 50 ಸಾವಿರಕ್ಕೂ ಕಡಿಮೆ ಸೋಂಕು ಪತ್ತೆ

**(1ನೇ ಪುಟದಿಂದ)** ತಿಳಿಸಲಾಗಿದೆ. ಸಕ್ರಿಯ ಸೋಂಕಿತರ ಸಂಖ್ಯೆ ಈಗ 5.95 ಲಕ್ಷಕ್ಕೆ ತಲುಪಿದೆ. ಈ ಹಿಂದೆ ಮಾರ್ಚ್ 23ರಂದು 50 ಸಾವಿರಕ್ಕಿಂತ ಕಡಿಮೆ 48,768 ಪ್ರಕರಣಗಳು ಕಂಡು ಬಂದಿದ್ದವು. ಕಳೆದ 44 ದಿನಗಳಿಂದ ಹೊಸ ಸೋಂಕಿತರಿಗಿಂತ ಗುಣಮುಖರಾದವರ ಸಂಖ್ಯೆ ಹೆಚ್ಚಾಗಿದೆ. ಪಾಸಿಟಿವ್ ದರ ಶೇ.2.97 ಆಗಿದ್ದರೆ, ಸಾವಿನ ಪ್ರಮಾಣ ಶೇ.1.31ರಷ್ಟಿದೆ.

## ಚುನಾವಣೆಗೆ ಸಿದ್ಧರಾಗಿ

**(1ನೇ ಪುಟದಿಂದ)** ಪಕ್ಷದ ವಕ್ತಾರ ಗಣೇಶ್ ಕಾರ್ಣಿಕ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಪಕ್ಷದ ಜನವಿರೋಧಿ ನೀತಿಗೆ ಸಭೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ ಎಂದರು.

ರಾಜ್ಯದಲ್ಲಿ ಈ ಹಿಂದೆ ಆಡಳಿತ ಮಾಡಿದ್ದ ಕಾಂಗ್ರೆಸ್ ಪಕ್ಷ, ರಾಜ್ಯದ ಜನತೆ ಕೋವಿಡ್‌ನಿಂದ ತತ್ತರಿಸುತ್ತಿರುವ ಸಂದರ್ಭದಲ್ಲಿ ಸಹಾಯಹಸ್ತ ನೀಡುವ ಬದಲು ಕೇವಲ ಋಣಾತ್ಮಕವಾಗಿ ಟೀಕೆ, ಟಿಪ್ಪಣಿ ಮಾಡುತ್ತಾ ಬಂದಿದೆ. ಅದರಲ್ಲೂ ಪ್ರಮುಖವಾಗಿ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು ತಾವು ಆಯ್ಕೆಯಾದ ಕ್ಷೇತ್ರಕ್ಕೂ ಹೋಗದೆ, ಕೇವಲ ಟ್ವಿಟ್ಟರ್‌ಗೆ ಸೀಮಿತರಾಗಿ ರಾಜಕೀಯ ಟೀಕೆ ಮಾಡಲು ತಮ್ಮನ್ನು ತೊಡಗಿಸಿಕೊಂಡಿದ್ದನ್ನು ಇಂದಿನ ಸಭೆ ಅತ್ಯಂತ ಗಂಭೀರವಾಗಿ ಪರಿಗಣಿಸಿ ಕಾಂಗ್ರೆಸ್ ಪಕ್ಷದ ಜನ ವಿರೋಧಿ ನೀತಿಯನ್ನು ತೀವ್ರವಾಗಿ ಖಂಡಿಸುವ ನಿರ್ಣಯ ಅಂಗೀಕರಿಸಿದೆ ಎಂದರು.

## ಚಿನ್ನ, ಬೆಳ್ಳಿ ಕೆಲಸಗಾರರ ಲಸಿಕಾ ಕಾರ್ಯಕ್ರಮಕ್ಕೆ ಎಸ್‌ಎಆರ್ ಚಾಲನೆ



ದಾವಣಗೆರೆ, ಜೂ.26- ಯೂತ್ಸ್ ಆಫ್ ದೈವಜ್ಞ ಬ್ರಾಹ್ಮಣ್ಸ್ ವತಿಯಿಂದ ದೈವಜ್ಞ ಸಮಾಜದ ಬಾಂಧವರು ಮತ್ತು ಚಿನ್ನ, ಬೆಳ್ಳಿ ಕೆಲಸಗಾರರಿಗೆ ನಗರದ ದೈವಜ್ಞ ಬ್ರಾಹ್ಮಣರ ಕಲ್ಯಾಣ ಮಂಟಪದಲ್ಲಿ ಉಚಿತ ಕೋವಿಡ್ ಲಸಿಕಾ ಕಾರ್ಯಕ್ರಮಕ್ಕೆ ಶಾಸಕ ಎಸ್.ಎ. ರವೀಂದ್ರನಾಥ್ ಚಾಲನೆ ನೀಡಿದರು.

ನಗರ ಪಾಲಿಕೆ ಮೇಯರ್ ಎಸ್.ಟಿ. ವೀರೇಶ್, ಪಾಲಿಕೆ ಸದಸ್ಯ ಕೆ. ಪ್ರಸನ್ನಕುಮಾರ್, ಆರ್‌ಸಿಎಚ್ ಅಧಿಕಾರಿ ಡಾ. ಮೀನಾಕ್ಷಿ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ, ನಂದಿ ಆಸ್ಪತ್ರೆ ವೈದ್ಯ ಡಾ. ಅಶ್ವಿನ್ ಶಶಿಧರ್, ಸಮಾಜದ ಅಧ್ಯಕ್ಷ ಸತ್ಯನಾರಾಯಣ ರಾಯ್ಕರ್, ಮುಖಂಡರಾದ ಶಂಕರ್ ಕಚವಿ, ವಿಠ್ಠಲ್ ಆವಾಜಿ, ಪ್ರಶಾಂತ್ ಹೆಗಡೆ, ಯೂತ್ಸ್ ಆಫ್ ದೈವಜ್ಞ ಬ್ರಾಹ್ಮಣ್ಸ್ ಸಂಘದ ಅಧ್ಯಕ್ಷ ಸಚಿನ್ ವೆರ್ಣೇಕರ್, ಪದಾಧಿಕಾರಿಗಳಾದ ದೀಪಕ್ ಶೇಟ್, ರವೀಂದ್ರ ಶೇಟ್, ಲಕ್ಷ್ಮಿಕಾಂತ್ ವೆರ್ಣೇಕರ್, ಯೋಗರಾಜ್ ಅಣ್ವೇಕರ್, ಸೋಹನ್ ರೇವಣಕರ್, ವಿನಯ್ ಕೊಲ್ವೇಕರ್, ರಘು ತೊಗಟೆ, ಅನಿಲ್, ಜಯರಾಮ್ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಮನೆಗೆಲಸದ ಮಹಿಳೆಯರಿಗೆ ಆಹಾರ ಕಿಟ್ ವಿತರಣೆ



ದಾವಣಗೆರೆ, ಜೂ.26 - ಕೊರೊನಾ ಉಪಟಳದಿಂದ ಸಂಕಷ್ಟಕ್ಕೀಡಾಗಿರುವ ಮನೆ ಕೆಲಸದ ಮಹಿಳೆಯರಿಗೆ ನಗರದ ಪಿ. ಜೆ. ಬಡಾವಣೆಯ ದೇವರ ಮನೆ ಕಾಂಪೌಂಡ್ ನ ಶ್ರೀಮತಿ ರೇಣುಕಮ್ಮ ಅವರು ತಾವು ಕೂಡಿಟ್ಟ ಹಣದಿಂದಲೇ ಆಹಾರ ಕಿಟ್ ಗಳನ್ನು ವಿತರಿಸಿದ್ದಾರೆ. ಈ ಸಂದರ್ಭದಲ್ಲಿ ಗಿರಿಜಮ್ಮ, ಮಲ್ಲಮ್ಮ ಕುಂದುವಾಡ, ಸುನಂದಮ್ಮ, ಹೊನ್ನಮ್ಮ, ಮಂಜಮ್ಮ, ಪಾರಮ್ಮ, ಅನಸೂಯಮ್ಮ ಹಾಜರಿದ್ದರು.

## ಯೋಜನೆಗಳಿಗೆ ಕೇಂದ್ರದ ಪುರಸ್ಕಾರ

**(1ನೇ ಪುಟದಿಂದ)** ಪರಿಸ್ಥಿತಿಯ ನಿರ್ವಹಣೆಗೆ ನೀಡುವ ವಿಶೇಷ ಪುರಸ್ಕಾರ ಬೆಂಗಳೂರು ಸ್ಮಾರ್ಟ್ ಸಿಟಿಗೆ ಲಭಿಸಿದೆ. ಹಾಗೆಯೇ ಕಾಮಗಾರಿಗಳಲ್ಲಿ ಪದವೀಧರರಿಗೆ ಕೆಲಸ ನೀಡಿ ಇಂಟರ್ನ್ ಶಿಪ್ ನೀಡುವ ಯೋಜನೆಗೆ ಬೆಂಗಳೂರು ಸ್ಮಾರ್ಟ್ ಸಿಟಿಯನ್ನು ರನ್ನರ್ ಅಪ್ ಎಂದು ಘೋಷಿಸಲಾಗಿದೆ. ಹವಾಮಾನ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಗೆ ರಾಷ್ಟ್ರ ಮಟ್ಟದಲ್ಲಿ 3 ನಕ್ಷತ್ರಗಳನ್ನು ನೀಡಲಾಗಿದೆ.


**ಭಾವಪೂರ್ಣ ಶ್ರದ್ಧಾಂಜಲಿ**



ಜನನ : 29.09.1991

ಮರಣ : 26.06.2021

ದಿನಾಂಕ 26.06.2021ರಂದು ನಿಧನರಾದ ಶಾಮನೂರು ಗ್ರಾಮದ ಅಜಾತ ಶತ್ರು, ಸ್ನೇಹಜೀವಿ

**ಶ್ರೀ ಕಣ್ಣಾಳ್ ಪಿ. ಅವಿನಾಶ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ತಂದೆ-ತಾಯಿ ಮತ್ತು ಕುಟುಂಬದವರಿಗೆ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಶ್ರದ್ಧಾಂಜಲಿ ಸಲ್ಲಿಸುವವರು :**

✦ಎಸ್. ಬಸವರಾಜ್, ನಗರಸಭಾ ಮಾಜಿ ಸದಸ್ಯರು ಹಾಗೂ ಜಿಲ್ಲಾ ಕಾಂಗ್ರೆಸ್ ಮುಖಂಡರು, ಶಾಮನೂರು
✦ಗ್ಯಾರಳ್ಳಿ ಗಣೇಶ್ ✦ಗುರಾಳರ ಸೋಮಣ್ಣ ✦ ಪೂಜಾರ್ ತಿಪ್ಪಣ್ಣ
✦ ಜವಳೇರ ಅಜ್ಜಣ್ಣ ✦ ಅಳಗೋಡಿ ನಿಂಗರಾಜ್
ಸ್ನೇಹಿತರಾದ ✦ ತಾಳಿಕಟ್ಟೆ ನವೀನ್ ✦ ಸಿ. ಪ್ರವೀಣ್ ✦ ಬಿ. ಮಂಜುನಾಥ
✦ ಎಂ. ರಾಕೇಶ್ ✦ ಆಲೂರಪ್ಪರ ರವಿ ✦ ಹನುಮಂತ ✦ ಬಿ. ಮಂಜು
✦ ಬಿ.ಆರ್. ಅಂಜಿನಪ್ಪ ✦ ಹರೀಶ್ ✦ಬಿ.ಎನ್. ಮಲ್ಲೇಶ್ ✦ ಭರತ್

**ಕಣ್ಣಾಳ್ ಅಂಜಿನಪ್ಪ ಸ್ನೇಹ ಬಳಗ ಹಾಗೂ ಎಸ್.ಎಸ್. ಮಲ್ಲಿಕಾರ್ಜುನ್ ಯುವಶಕ್ತಿ ಬಳಗ (ರಿ.) ದ ಸರ್ವ ಪದಾಧಿಕಾರಿಗಳು ಮತ್ತು ಶಾಮನೂರು ಗ್ರಾಮಸ್ಥರು.**


## ಡೆಲ್ಟಾ ಪ್ಲಸ್ : ಟೆಸ್ಟ್‌ಗೆ ಸೂಚನೆ

**(1ನೇ ಪುಟದಿಂದ)** ಕ್ರಮ ತೆಗೆದುಕೊಳ್ಳಬೇಕಿದೆ ಎಂದು ತಿಳಿಸಲಾಗಿದೆ.

ಸೋಂಕು ಕಂಡು ಬಂದ ಜಿಲ್ಲೆಗಳಲ್ಲಿ ಹೆಚ್ಚು ನಿಯಂತ್ರಣ ಕ್ರಮಗಳು ಹಾಗೂ ಜನಸಂದಣಿ ತಡೆಯಬೇಕಿದೆ. ವ್ಯಾಪಕವಾದ ಟೆಸ್ಟ್ ಮಾಡುವ ಜೊತೆಗೆ ಆದ್ಯತೆ ಮೇಲೆ ಲಸಿಕೆ ನೀಡಬೇಕು ಎಂದು ತಿಳಿಸಲಾಗಿದೆ.

ಮೈಸೂರು ಜಿಲ್ಲೆಯಲ್ಲಿ ಡೆಲ್ಟಾ ಪ್ಲಸ್ ಸೋಂಕು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಅಗತ್ಯ ಪ್ರಮಾಣದ ಮಾದರಿಗಳನ್ನು ಐ.ಎನ್.ಎಸ್.ಎ.ಸಿ.ಒ.ಜಿ. ಪ್ರಯೋಗಾಲಯಕ್ಕೆ ಕಳಿಸಬೇಕು. ರಾಜ್ಯದ ಇತರೆ ಜಿಲ್ಲೆಗಳಲ್ಲೂ ಇದೇ ರೀತಿಯ ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಲಾಗಿದೆ.


**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 26.06.2021 ರಂದು ನಿಧನರಾದ ಹಿರೇತೊಗಲೇರಿ ಗ್ರಾಮದ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರು ಮತ್ತು ಜಮೀನ್ದಾರರಾದ

**ಶ್ರೀ ಜಿ.ಬಿ. ರಂಗನಾಥ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

◆ ಹೆಚ್.ಎಂ. ಚನ್ನಬಸಯ್ಯ ಮತ್ತು ಮಕ್ಕಳು
◆ ದಿ॥ ಪರಮಶಿವಯ್ಯ ಮತ್ತು ಮಕ್ಕಳು
◆ ದಿ॥ ಟಿ.ಎಂ. ಮಹೇಶ್ವರಯ್ಯ ಮತ್ತು ಮಕ್ಕಳು
◆ ಟಿ.ಎಂ. ಬಸಲಿಂಗಯ್ಯ ಮತ್ತು ಸಹೋದರರು, ಮಕ್ಕಳು
◆ ದಿ॥ ಟಿ.ಎಂ. ಜಯದೇವಯ್ಯ ಮತ್ತು ಮಕ್ಕಳು
◆ ದಿ॥ ಟಿ.ಎಂ. ಹಾಲಯ್ಯ ಮತ್ತು ಮಕ್ಕಳು
◆ ದಿ॥ ಟಿ.ಎಂ. ಶಿವಲಿಂಗಯ್ಯ ಮತ್ತು ಮಕ್ಕಳು
◆ ಹೆಚ್.ಎಂ. ಮಹಾದೇವಯ್ಯ ಮತ್ತು ಮಕ್ಕಳು
◆ ಹೆಚ್.ಎಂ. ಓಂಕಾರಯ್ಯ ಮತ್ತು ಮಕ್ಕಳು
◆ ಟಿ.ಹೆಚ್. ಶೈಲೇಂದ್ರಕುಮಾರ್ ಮತ್ತು ಮಕ್ಕಳು
ಹಾಗೂ ಹಿರೇತೊಗಲೇರಿ ಗ್ರಾಮಸ್ಥರು, ಕುಟುಂಬದವರು


# ನೀರಗಂಟಿ ಹುದ್ದೆಗೆ ಲಂಚ ಕೇಳಿದ ಗ್ರಾಪಂ ಕಾರ್ಯದರ್ಶಿ

**(1ನೇ ಪುಟದಿಂದ)** ಪಂಚಾಯ್ತಿ ಅಧಿಕಾರಿಗಳಿಗೆ ತಲಾ 20 ಸಾವಿರ ರೂ. ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳಿಗೆ ಹಣ ಕೊಡಬೇಕಾಗುತ್ತದೆ. ನನಗೂ 20 ಸಾವಿರ ಹೆಚ್ಚಿಗೆ ಕೇಳಿದ್ದೇನೆ. ಇಷ್ಟು ಕೊಟ್ಟಲ್ಲಿ ನಿನ್ನ ಕೆಲಸ ಆದಂತೆ ಎಂದು ಪ್ರಭಾರ ಪಿಡಿಓ ಶ್ರೀನಿವಾಸ್ ಹೇಳುತ್ತಾನೆ.

ಇದಕ್ಕೆ ಪ್ರತಿಕ್ರಿಯಿಸುವ ಅಂಜಿನಪ್ಪ ಅಲ್ಲಾ ಸಾರ್... ಕಳೆದ ಎರಡು ವರ್ಷಗಳಿಂದ ಸಂಬಳ ಇಲ್ಲದೆ ನೀರಗಂಟಿ ಕೆಲಸ ಮಾಡುತ್ತಿದ್ದೇನೆ. ನೀವು ಈಗ ಅಷ್ಟೊಂದು ಹಣ ಕೇಳಿದರೆ ಎಲ್ಲಿಂದ ತರಬೇಕು? ಮನೆಯಲ್ಲಿ ಚಿಕ್ಕ ಮಕ್ಕಳಿದ್ದಾರೆ. ಬಡತನ ಇದೆ. ಸಂಸಾರ ನಡೆಸುವುದು ಕಷ್ಟವಾಗಿದೆ ಎಂದು ಅಂಜಿನಪ್ಪ ಅಳಲು ತೋಡಿಕೊಳ್ಳುತ್ತಾನೆ. ಆಗ ಶ್ರೀನಿವಾಸ್ ಎಂ.ಎ., ಎಂ.ಇಡಿ ಪದವೀಧರರು ನೀರಗಂಟಿ ಹುದ್ದೆಗೆ 8 ರಿಂದ 10 ಲಕ್ಷ ರೂ. ಕೊಡಲು ತಯಾರಿದ್ದಾರೆ. ನೀರಗಂಟಿಯಿಂದ ಮುಂದೆ ಬಿಲ್ ಕಲೆಕ್ಟರ್ ಕೆಲಸಕ್ಕೆ ಬಡ್ತಿ ಸಿಗುತ್ತದೆ. ಮುಂದೆ ಅನುಕೂಲ ಆಗುತ್ತದೆ. ನೋಡು ನಿನ್ನ ಇಷ್ಟ. ಪಿಡಿಓ ಮಾತೇ ಅಂತಿಮವಾಗಿದ್ದು, ಎಲ್ಲರನ್ನೂ ನಾನು ನಿಭಾಯಿಸುತ್ತೇನೆ ಎಂದು ಕನ್ನಡ ಮತ್ತು ತೆಲುಗು ಭಾಷೆಯಲ್ಲಿ ಅಂಜಿನಪ್ಪ ಮತ್ತು ಸದಸ್ಯರೊಬ್ಬರೊಂದಿಗೆ ಲಂಚದ ಹಣದ ಬಗ್ಗೆ ಸುದೀರ್ಘವಾಗಿ ಮಾತನಾಡುವುದು ಸಂಭಾಷಣೆಯಲ್ಲಿದೆ.

ತಾಲ್ಲೂಕಿನ ದೇವಿಕೆರೆ ಪಂಚಾಯ್ತಿಯಲ್ಲಿ ಬಿಲ್ ಕಲೆಕ್ಟರ್ ಆಗಿದ್ದ ಶ್ರೀನಿವಾಸ್ ಗ್ರೇಡ್-2 ಕಾರ್ಯದರ್ಶಿಯಾಗಿ ಬಡ್ತಿ ಪಡೆದಿದ್ದರು. ನವೆಂಬರ್ 25- 2020 ರಂದು ದಿದ್ದಿಗಿ ಪಂಚಾಯ್ತಿಗೆ ಕಾರ್ಯದರ್ಶಿಯಾಗಿ ನಿಯೋಜನೆ ಮಾಡಲಾಗಿತ್ತು.

ದಿದ್ದಿಗೆ ಪಂಚಾಯ್ತಿಯಲ್ಲಿ 15ನೇ ಹಣಕಾಸು ಮತ್ತು ನರೇಗಾ ಯೋಜನೆಯಲ್ಲಿ ಹಣ ದುರುಪಯೋಗ ಮಾಡಿರುವ ಆರೋಪಗಳು ಕಾರ್ಯದರ್ಶಿ ಮೇಲಿದೆ.


**ಬಾಡದ ನಾಗಮ್ಮ ನಿಧನ**



ದಾವಣಗೆರೆ ತಾಲ್ಲೂಕು ಬಾಡ ಗ್ರಾಮದ ವಾಸಿ ಬಾಲ ಹನುಮಪ್ಪರ ದಿ. ಯಲ್ಲಪ್ಪನವರ ಪತ್ನಿ ನಾಗಮ್ಮ (78) ಇವರು ದಿನಾಂಕ 26.06.2021ರ ಶನಿವಾರ ಮಧ್ಯಾಹ್ನ 3.55 ಕ್ಕೆ ನಿಧನರಾದರು. ನಾಲ್ವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 27.06.2021ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ದಾವಣಗೆರೆ ತಾಲ್ಲೂಕು ಬಾಡ ಗ್ರಾಮದ ಮೃತರ ತೋಟದಲ್ಲಿ ನೆರವೇರಲಿದೆ.


## ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ಪರಿಹಾರಕ್ಕೆ ಆಗ್ರಹ

ದಾವಣಗೆರೆ, ಜೂ.26- ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ಧನ ನೀಡುವುದು ಸಾಧ್ಯವಿಲ್ಲವೆಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸುವ ಮೂಲಕ ಮೃತ ಕುಟುಂಬಗಳಿಗೆ ದ್ರೋಹ ಬಗೆದಿದೆ ಎಂದು ಕೆಪಿಸಿಸಿ ರಾಜ್ಯ ವಕ್ತಾರ ಡಿ. ಬಸವರಾಜ್ ಮೋದಿ ಸರ್ಕಾರದ ನಡೆಯನ್ನು ಖಂಡಿಸಿದ್ದಾರೆ.

ಪ್ರಧಾನಿ ಹೊಸ ಮನೆ ನಿರ್ಮಾಣ ರದ್ದುಪಡಿಸಿ, ದೇಶದ ಕೋವಿಡ್‌ನಿಂದ ಮೃತರಾದ ಎಲ್ಲಾ ಕುಟುಂಬಗಳಿಗೂ 4 ಲಕ್ಷ ರೂ. ಪರಿಹಾರ ನೀಡಬೇಕು. ಮೋದಿ ಅವರು ಕೋವಿಡ್ ಸಂಕಷ್ಟ ಕಾಲದಲ್ಲಿ ಭಾರತೀಯರಿಗೆ 20 ಲಕ್ಷ ಕೋಟಿಯ ಆತ್ಮನಿರ್ಭರ್ ಯೋಜನೆಯನ್ನು ನೀಡಿದ್ದಾಗಿ ಬೊಬ್ಬೆ ಹೊಡೆದಿದ್ದರು. ಭಾರತದ ಆರ್ಥಿಕತೆ 5 ಟ್ರಿಲಿಯನ್ ಡಾಲರ್‌ಗೆ ಏರಿಕೆ ಆಗಲಿದೆ ಎಂದು ಉಡಾಫೆ ಮಾತುಗಳನ್ನಾಡುವ ಮೋದಿ, ದೊಡ್ಡ ಮನಸ್ಸು ಮಾಡಿ ಪರಿಹಾರ ನೀಡಲು ಮುಂದಾಗಬೇಕು ಎಂದು ಅವರು ಆಗ್ರಹಿಸಿದ್ದಾರೆ.

## ಮಹಿಳಾ ಮಿಲಿಟರಿ ಪೊಲೀಸ್ ನೇಮಕಾತಿಗೆ ಅರ್ಜಿ

ದಾವಣಗೆರೆ, ಜೂ.26- ಅಸ್ಸಾಂ ರೆಜಿಮೆಂಟ್‌ನ ಹಿರಿಯ ಅಭಿಲೇಖಾಲಯ ಕಚೇರಿ ಇವರು, ಮಹಿಳಾ ಮಿಲಿಟರಿ ಪೊಲೀಸ್ ನೇಮಕಾತಿ ರ್‍ಯಾಲಿಯನ್ನು ಆಯೋಜಿಸಿದ್ದು, ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಮಹಿಳಾ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಜುಲೈ 20 ರೊಳಗೆ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ www.joinindianarmy.nic.in ಜಾಲತಾಣವನ್ನು ಸಂಪರ್ಕಿಸಲು ಶಿವಮೊಗ್ಗ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

# ರಾಶಿ ಭವಿಷ್ಯ

**ದಿನಾಂಕ : 27.06.2021 ರಿಂದ 03.07.2021**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಭೂಮಿ ವ್ಯವಹಾರದಲ್ಲಿ ಅಥವಾ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಸಾಕಷ್ಟು ಆದಾಯವೇನೋ ಬರಲಿದೆ, ಆದರೆ ತುಸು ಎಚ್ಚರ ತಪ್ಪಿದರೆ ಭಾರೀ ನಷ್ಟ, ನಿಮ್ಮ ಅನೇಕ ಕೆಲಸ, ಕಾರ್ಯಗಳಿಗೆ ಗೆಳೆಯರಿಂದ ಸಾಕಷ್ಟು ನೆರವು, ಸಾಕಷ್ಟು ಪಳಗಿದ ಹಾಗು ಶ್ರಮ ಜೀವಿಗಳಾದ ನಿಮಗೆ ಅವಕಾಶಗಳು ಬರಲಿವೆ. ರಾಜಕಾರಣಿಗಳು ಸಮಸ್ಯೆಗಳನ್ನೇನಾದರೂ ಮೈಮೇಲೆ ಎಳೆದುಕೊಂಡಲ್ಲಿ ಅವರ ಭವಿಷ್ಯವೇ ಮಂಕಾಗಬಹುದು. ಅಧ್ಯಾತ್ಮ ಉಪನ್ಯಾಸ ಕರಿಗೆ ಹೇರಳ ಅವಕಾಶಗಳು ಬರಲಿವೆ. ಸಮಾಜಸೇವಕರಿಗೆ ಸನ್ಮಾನಗಳು, ಅವಿವಾಹಿತರಿಗೆ ಕಂಕಣಭಾಗ್ಯ, ಆಸ್ತಿ ಖರೀದಿ ಸದ್ಯಕ್ಕೆ ಮುಂದೂಡಿ, ಆಡುವ ಮಾತಿನಲ್ಲಿ ಹಿಡಿತವಿರಲಿ. ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ಗುರು ಚರಿತ್ರೆ ಪಾರಾಯಣ ಮಾಡಿ. ಆರೋಗ್ಯದ ಬಗ್ಗೆ ಅಲಕ್ಷೆಬೇಡ. ಪಶುಪಕ್ಷಿಗಳಿಗೆ ಆಹಾರ ನೀಡಿ. ಸೋಮ, ಮಂಗಳ, ಬುಧ, ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಈ ವಾರ ತುಸು ನೆಮ್ಮದಿ, ಆಕಸ್ಮಿಕ ಧನಲಾಭ, ಆದಾಯದಲ್ಲೂ ತೀವ್ರ ಹೆಚ್ಚಳ, ಬಂಧುಗಳ ಸಂಪೂರ್ಣ ನೆರವು, ಸರ್ಕಾರಿ ನೌಕರರಿಗೆ ವೃತ್ತಿಯಲ್ಲಿ ಅನೇಕ ಸಮಸ್ಯೆಗಳು, ತಾಳ್ಮೆ ಇರಲಿ, ಅತಿಯಾದ ತಿರುಗಾಟದಿಂದಾಗಿ ಆರೋಗ್ಯದ ಮೇಲೆ ಅಡ್ಡಪರಿಣಾಮ, ಅನಾವಶ್ಯಕ ಖರ್ಚಿಗೆ ಕಡಿವಾಣವಿರಲಿ, ರೈತಾಪಿ ಮಿತ್ರರಿಗೆ ಕಾರ್ಮಿಕರ ಸಮಸ್ಯೆಗಳು ಕಾಡಲಿವೆ, ಹೈನುಗಾರಿಕೆಯಲ್ಲಿ ವಹಿವಾಟು ಹೆಚ್ಚಾದರೂ, ಲಾಭ ಮಾತ್ರ ಅಷ್ಟಕ್ಕಷ್ಟೇ. ಅನಿರೀಕ್ಷಿತವಾಗಿ ಅತಿಥಿಗಳ ಆಗಮನ, ಶುಭ ಸಮಾರಂಭದಲ್ಲಿ ಪಾಲ್ಗೊಳ್ಳುವಿರಿ, ವ್ಯಾಪಾರಿಗಳು ಗ್ರಾಹಕರೊಂದಿಗೆ, ಸೌಹಾರ್ದತೆಯಿಂದ ವರ್ತಿಸಿ, ವ್ಯವಹಾರ ವೃದ್ಧಿಸಲಿದೆ. ಗುರುಚರಿತ್ರೆ ಮತ್ತು ವಿಷ್ಣು ಸಹಸ್ರನಾಮ ಪಠಿಸಿರಿ, ಗೆಳೆಯರೊಂದಿಗೆ ಸಹಕರಿಸಿ. ಗುರು, ಶುಕ್ರ, ಶನಿ, ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಜಾಗವನ್ನು ಖರೀದಿಸುವ ಮೊದಲು ದಾಖಲೆಗಳನ್ನು ಪರಿಶೀಲಿಸಿ, ಆರಂಭಿಸಿದ ಸ್ವಂತ ಉದ್ಯೋಗದಲ್ಲಿ ಯಶಸ್ವಿಯಾಗುವುದು. ಹಣದ ಹರಿವು ಸಾಧರಣವಾಗಿರುವುದರಿಂದ ಮಡದಿ, ಮಕ್ಕಳು ಮಾಡುವ ಖರ್ಚಿನ ಮೇಲೆ ಕಡಿವಾಣ ಹಾಕುವುದು ಉತ್ತಮ. ಇಲ್ಲವಾದಲ್ಲಿ ಉಳಿತಾಯದ ಗಂಟು ಕರಗಬಹುದು. ಸಾರ್ವಜನಿಕವಾಗಿ ವ್ಯವಹರಿಸುವಾಗ ಸಾಕಷ್ಟು ಎಚ್ಚರದಿಂದಿರಿ. ಮತ್ತೊಬ್ಬರ ಸಾಲಸೋಲಗಳಿಗೆ ಜಾಮೀನುದಾರರಾಗಬೇಡಿ. ಸಂಬಂಧಿಕರಿಗೆ ಆರ್ಥಿಕ ನೆರವು ನೀಡುವಿರಿ. ಆರಕ್ಷಣಾ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಕರ್ತವ್ಯದಲ್ಲಿ ಹೆಚ್ಚಿದ ಜವಾಬ್ದಾರಿಯಿಂದ ಖಿನ್ನತೆಗೆ ದೂಡಬಹುದು. ಸಾಧ್ಯವಾದಷ್ಟು ಯೋಗ, ಧ್ಯಾನಗಳಿಗೆ ಮೊರೆ ಹೋಗುವುದು ಉತ್ತಮ. ಭಾನು-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಆರಂಭಿಸಿದ ಹೊಸ ಉದ್ಯಮದಲ್ಲಿ ಲಾಭ, ಸರ್ಕಾರದಿಂದ ಆಗಬೇಕಾದ ಕೆಲಸಗಳು ಪ್ರಭಾವೀ ವ್ಯಕ್ತಿಗಳ ಶಿಫಾರಸ್ಸಿನಿಂದ ಮಾತ್ರ ಸಾಧ್ಯ. ಅನಾವಶ್ಯಕ ತಿರುಗಾಟಗಳನ್ನು ನಿಲ್ಲಿಸದೇ ಹೋದಲ್ಲಿ, ಆರೋಗ್ಯದ ಸಮಸ್ಯೆ ಜೊತೆಗೆ ವೈದ್ಯಕೀಯ ವೆಚ್ಚ ಹೆಚ್ಚಾಗಬಹುದು. ಮಕ್ಕಳ ವಿದ್ಯಾಭ್ಯಾಸದಲ್ಲಿ ಸಾಕಷ್ಟು ಪ್ರಗತಿ, ಸೌಂದರ್ಯ ವರ್ಧಕ ಸಾಮಗ್ರಿಗಳ ಮಾರಾಟ ಹೆಚ್ಚಾಗಲಿದೆ. ಅಬಕಾರಿ ಇಲಾಖೆಯಲ್ಲಿರುವವರಿಗೆ ಅನಿರೀಕ್ಷಿತವಾಗಿ ವರ್ಗಾವರ್ಗಿಯಾಗುವ ಸಂಭವವಿದೆ. ನಿಶ್ಚಿತಾರ್ಥ ಕಾರ್ಯಕ್ರಮವು ಮುಂದೆ ಹೋಗಬಹುದು. ಹಳೆಯ ಮಿತ್ರರ ಭೇಟಿ, ಸಾಧು ಸಂತರ ಭೇಟಿ, ಸಾಧ್ಯವಾದಷ್ಟು ಗುರು ಜಪ ಮಾಡಿ. ಸೋಮ, ಗುರು, ಶುಕ್ರ, ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಖರ್ಚುವೆಚ್ಚಗಳು ಹಿಡಿತದಲ್ಲಿರುವುದು ಲೇಸು. ಮನೆ ಕಟ್ಟುತ್ತಿರುವವರಿಗೆ ನಿರ್ಮಾಣ ವೆಚ್ಚ ಮಿತಿಮೀರುವುದು. ಓದಿನಲ್ಲಿ ಏಕಾಗ್ರತೆ ಸಾಧಿಸುವುದು ಉತ್ತಮ. ನಿರುದ್ಯೋಗಿ ಪದವೀಧರರಿಗೆ ಸಾಧಾರಣ ವೇತನದ ನೌಕರಿ ಸಿಗಲಿದೆ, ಚಿಕ್ಕಮಕ್ಕಳ ಆರೋಗ್ಯದಲ್ಲಿ ತುಸು ಏರುಪೇರಾಗುವ ಸಂಭವವಿದೆ. ಮಗಳ ಮದುವೆ ವಿಚಾರದಲ್ಲಿ ಆತುರಬೇಡ. ಮೇಲಾಧಿಕಾರಿಗಳಿಂದ ನಿಮ್ಮ ಬಗ್ಗೆ ಮೆಚ್ಚಿಗೆ ನುಡಿಗಳು ಕೇಳಿಬರಲಿವೆ. ಲೇವಾದೇವಿ ವ್ಯವಹಾರದಲ್ಲಿ ಸಧ್ಯದ ಪರಿಸ್ಥಿತಿಯಲ್ಲಿ ಹೆಚ್ಚಿನ ಹೂಡಿಕೆಬೇಡ. ಕುಲದೇವತಾನುಗ್ರಹದಿಂದ ಮನೆಯಲ್ಲಿ ಶಾಂತಿ-ನೆಮ್ಮದಿ ಮೊದಲಾದ ಹೋಮ, ಹವನಾದಿಗಳು ಭರದಿಂದ ನಡೆಯಲಿವೆ. ವಾಹನದಲ್ಲಿ ಎಚ್ಚರ, ಗುರು ಜಪ ಮಾಡಿರಿ, ಹಸುಗಳಿಗೆ ಮೇವು ಕೊಡಿ. ಭಾನು ,ಬುಧ, ಶುಕ್ರ, ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಮಡದಿ ಮಕ್ಕಳ ಭಾವನೆಗಳಿಗೆ ಬೆಲೆ ಇರಲಿ, ಪದವೀಧರರಿಗೆ ಉದ್ಯೋಗದ ಚಿಂತೆ, ಹಿರಿಯರಾಡುವ ಒರಟು ಮಾತುಗಳನ್ನು ಸಹಿಸಿಕೊಳ್ಳದೇ ವಿಧಿಯಿಲ್ಲ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಸಂಘ-ಸಂಸ್ಥೆಗಳಿಂದ ನೆರವು, ಅರ್ಧಕ್ಕೇ ನಿಂತಿರುವ ಕೆಲಸಗಳನ್ನು ಪೂರ್ಣಗೊಳಿಸಿ, ಹೈನುಗಾರಿಕೆಯಲ್ಲಿ ಲಾಭ, ಅತಿಯಾದ ಬಳಲಿಕೆಯಿಂದಾಗಿ ದೇಹದಲ್ಲಿ ಆಯಾಸ, ದೈನಂದಿನ ಚಟುವಟಿಕೆಯಲ್ಲಿ ಪ್ರಗತಿ, ಭೂಮಿ ಮಾರಾಟ ಮಾಡುವಾಗ ಮೋಸ ಹೋಗುವ ಪ್ರಸಂಗ, ವೈದ್ಯಕೀಯ ವೃತ್ತಿಯಲ್ಲಿರುವವರಿಗೆ ಹೆಚ್ಚಿನ ಜವಾಬ್ದಾರಿ, ಕಳೆದುಹೋಗಿದ್ದ ಅಮೂಲ್ಯ ದಾಖಲೆಯೊಂದು ಮರಳಿ ಕೈಸೇರಲಿದೆ. ನ್ಯಾಯಾಲಯದ ವ್ಯಾಜ್ಯಗಳನ್ನು ಸಾಧ್ಯವಾದಷ್ಟು ರಾಜೀ ಪಂಚಾಯ್ತಿಯೊಂದಿಗೆ ಬಗೆಹರಿಸಿಕೊಳ್ಳಿ, ಮಂಗಳ, ಬುಧ, ಗುರು, ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಪೂರ್ವಿಕರ ಜಮೀನಿಗೆ ಸಂಬಂಧಪಟ್ಟ ವ್ಯಾಜ್ಯ ಬಗೆಹರಿಯಲಿದೆ. ಆಯುಧಗಳನ್ನು ಉಪಯೋಗಿಸುವಾಗ ಎಚ್ಚರದಿಂದಿರಿ. ಮಕ್ಕಳ ನಡಾವಳಿಯಲ್ಲಿ ವ್ಯತ್ಯಾಸ ಮತ್ತು ಅವರ ಬಿರುನುಡಿಗಳು ಮನಸ್ಸಿಗೆ ಬೇಸರ ಮೂಡಿಸಲಿದೆ. ಸರ್ಕಾರಿ ಸಂಸ್ಥೆಗಳೊಂದಿಗೆ ವ್ಯವಹರಿಸುವುದರಿಂದ ಹೆಚ್ಚಿನ ಲಾಭವಾಗಲಿದೆ. ಒರಟು ಮಾತುಗಳಿಂದ ಬಂಧುಗಳ ಮಧ್ಯೆ ನಿಷ್ಠೂರವಾಗುವಿರಿ. ಆದಾಯಕ್ಕೆ ತಕ್ಕಂತೆ ಖರ್ಚು-ವೆಚ್ಚಗಳನ್ನು ಸರಿದೂಗಿಸಿ, ಖಾದ್ಯತೈಲ, ಬೇಳೆಕಾಳು ವ್ಯಾಪಾರಿಗಳಿಗೆ ವಹಿವಾಟು ಹೆಚ್ಚಾಗುವುದು, ಪತ್ರಿಕಾ ರಂಗದಲ್ಲಿರುವವರಿಗೆ ಸರ್ಕಾರ ಪ್ರಾಯೋಜಿತ ಪ್ರಶಸ್ತಿಗಳು ಬರಲಿವೆ. ಅತಿಯಾದ ಖಾರ ಹಾಗು ಕರಿದ ಪದಾರ್ಥಗಳನ್ನು ತಿನ್ನುವುದರಿಂದ ಅಜೀರ್ಣ, ಸಾಕುಪ್ರಾಣಿಗಳಿಂದ ಚಿಕ್ಕಮಕ್ಕಳಿಗೆ ಅಪಾಯ, ಕುಲದೇವತಾರಾಧನೆ ಮಾಡಿರಿ. ಭಾನು, ಮಂಗಳ,ಬುಧ, ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ವೃತ್ತಿಗೆ ಬಂದಿದ್ದ ಅಡಚಣೆಗಳು ನಿವಾರಣೆಯಾಗಲಿವೆ. ಪ್ರಾಯಕ್ಕೆ ಬಂದ ಮಕ್ಕಳನ್ನು ನಿಮ್ಮೊಂದಿಗೆ ವೃತ್ತಿಯಲ್ಲಿ ತೊಡಗಿಸಿಕೊಳ್ಳಿ, ದುಡ್ಡುಕಾಸಿನ ವಿಚಾರದಲ್ಲಿ ಕಟ್ಟುನಿಟ್ಟಾಗಿರಿ, ಆರಂಭಿಸಿರುವ ಮನೆ ರಿಪೇರಿ ಕೆಲಸಗಳು ನಿರಾತಂಕವಾಗಿ ಮುನ್ನಡೆಯಲಿವೆ. ರಾಜಕಾರಣಿಗಳ ಮಾತು ಅಥವಾ ಅವರ ಬೆಂಬಲವನ್ನು ನಂಬಿ ಯಾವುದೇ ಕೆಲಸಗಳನ್ನು ಮಾಡಬೇಡಿ. ಸಾಹಿತಿಗಳ ಕೃತಿಗಳಿಗೆ ಬೇಡಿಕೆ ಹೆಚ್ಚಲಿದೆ. ಖಾಸಗಿ ಕಂಪನಿಯಲ್ಲಿರುವ ಉನ್ನತಾಧಿಕಾರಿಗಳಿಗೆ ಪದೋನ್ನತಿ, ಮಗಳ ಮದುವೆ ವಿಚಾರದಲ್ಲಿ ಅವಸರದ ನಿರ್ಧಾರ ಬೇಡ. ಹೈನುಗಾರಿಕೆಗೆ ಸಧ್ಯದ ಪರಿಸ್ಥಿತಿಯಲ್ಲಿ ಅಷ್ಟು ಲಾಭದಾಯಕವಲ್ಲ. ಗುರುಗಳ ಅನುಗ್ರಹ ಸಂಪಾದಿಸಲು ಯತ್ನಿಸಿ. ಭಾನು, ಮಂಗಳ, ಗುರು, ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಹಣದ ಹರಿವು ಸಾಕಷ್ಟು ಕಡಿಮೆಯಿರುವುದರಿಂದ, ಆಲೋಚಿಸಿ ನಿರ್ಣಯ ತೆಗೆದುಕೊಳ್ಳಿ, ಆಸ್ತಿ ಕೊಳ್ಳುವ ಅಥವಾ ಮನೆ ಕಟ್ಟುವ ವಿಚಾರಗಳನ್ನು ಮುಂದೆ ಹಾಕುವುದು ಉತ್ತಮ. ಮಕ್ಕಳ ವಿದ್ಯಾಭ್ಯಾಸದಲ್ಲಿ ತುಸು ಹಿನ್ನಡೆ, ಉದ್ಯಮಿಗಳಿಗೆ ಹೊಸ ಶಾಖೆಗಳನ್ನು ತೆರೆಯಲು ಹಣಕಾಸು ಸಂಸ್ಥೆಗಳಿಂದ ಸಾಕಷ್ಟು ನೆರವು, ಕೋಪತಾಪಗಳನ್ನೇ ಮುಂದಿಟ್ಟುಕೊಂಡು ವ್ಯವಹರಿಸಿದಲ್ಲಿ ನಷ್ಟದೊಂದಿಗೆ ಗೆಳೆಯರ ವಿಶ್ವಾಸವನ್ನೂ ಕಳೆದುಕೊಳ್ಳುವಿರಿ. ಮಹಿಳೆಯರು ಅಪರಿಚಿತ ರೊಂದಿಗೆ ಗೆಳೆತನ ಬೆಳೆಸುವುದು ಸೂಕ್ತವಲ್ಲ. ಚಿನ್ನದ ವ್ಯಾಪಾರಿಗಳು ಲೆಕ್ಕಪತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸದೇ ಹೋದಲ್ಲಿ ತೊಂದರೆಗೆ ಸಿಲುಕಬಹುದು. ಬದುಕಿನಲ್ಲಿ ಬದಲಾವಣೆ ಅನಿವಾರ್ಯವಾಗಿರುವುದರಿಂದ ಅದಕ್ಕೆ ಹೊಂದಿಕೊಳ್ಳುವುದು ಉತ್ತಮ. ಗಣೇಶನನ್ನು ಆರಾಧಿಸಿದರೆ ತೊಂದರೆಗಳು ಪರಿಹಾರವಾಗುವವು. ಸೋಮ, ಮಂಗಳ, ಗುರು, ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ರಾಜಕಾರಣಿಗಳಿಗೆ ಪರೀಕ್ಷಾ ಕಾಲವಿದು. ನಿರುದ್ಯೋಗಿಗಳು ಕೆಲಸಕ್ಕೆ ಕೆಲವು ಸಮಯ ಕಾಯದೆ ವಿಧಿಯಿಲ್ಲ. ನಿರೀಕ್ಷಿತ ಮಟ್ಟದಲ್ಲಿ ಹಣದ ಹರಿವು ಚೆನ್ನಾಗಿಯೇ ಇರುವುದರಿಂದ ಆರ್ಥಿಕ ಮುಗ್ಗಟ್ಟು ಬಾಧಿಸದು. ವೃತ್ತಿಯಲ್ಲಿ ಶತ್ರುಬಾಧೆ ತಪ್ಪಿದ್ದಲ್ಲ. ಅವರನ್ನು ಅಲಕ್ಷಿಸುವುದೇ ಅದಕ್ಕಿರುವ ಉಪಾಯ. ಮಕ್ಕಳ ಪ್ರಗತಿ ಮನೆಮಂದಿಗೆ ಸಂತಸ ತರಲಿದೆ. ಪ್ರಯಾಣದಿಂದಾಗಿ ಮಡದಿಯ ಆರೋಗ್ಯದಲ್ಲಿ ವ್ಯತ್ಯಾಸ, ಅದಕ್ಕೆ ಬೇಕಾದ ಹಣಕಾಸಿನ ನೆರವು ತಾನಾಗಿಯೇ ದೊರಕಲಿದೆ. ಪಾಲುದಾರರೊಂದಿಗೆ ಉತ್ತಮ ಒಪ್ಪಂದ ಮಾಡಿಕೊಳ್ಳಿ. ಮನೆಕಟ್ಟುವ ಅಥವಾ ಹಳೇಮನೆ ರಿಪೇರಿ ಕೆಲಸಗಳನ್ನು ತಾತ್ಕಾಲಿಕವಾಗಿ ಮುಂದೂಡಿರಿ. ಬುಧ, ಶುಕ್ರ, ಶನಿ, ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ದಣಿವ ದೇಹಕ್ಕೆ ಸಾಕಷ್ಟು ವಿಶ್ರಾಂತಿಯನ್ನು ಕಾಲಕಾಲಕ್ಕೆ ಕೊಡುವುದು ಅಷ್ಟೇಮುಖ್ಯ ಎಂಬುದು ನೆನಪಿರಲಿ. ವೈದ್ಯರಿಗೂ ಕೂಡ ಅವಿರತ ದುಡಿತವಾಗಲಿದೆ. ಮಕ್ಕಳ ವಿದ್ಯಾಭ್ಯಾಸಕ್ಕೆ ತುಸು ಹೆಚ್ಚೇ ಎನ್ನುವಷ್ಟು ವೆಚ್ಚವಾಗಲಿದೆ. ಸಮಾಜ ಸೇವೆಯಲ್ಲಿ ತೊಡಗಿರುವ ಮಹಿಳೆಯರಿಗೆ ಸಾಮಾಜಿಕ ಗೌರವದೊಂದಿಗೆ ಘನತೆ ಹೆಚ್ಚಲಿದೆ. ರಾಜಕೀಯ ಪ್ರವೇಶ ಮಾಡಲು ಇದು ಸಕಾಲವಾದರೂ, ಕೆಲಕಾಲ ಕಾಯದೆ ವಿಧಿಯಿಲ್ಲ. ಆಸ್ತಿ ಸಂಬಂಧಿ ವಿವಾದಗಳನ್ನು ಒಮ್ಮತದಿಂದ ಹಿರಿಯರ ಸಮ್ಮುಖದಲ್ಲೇ ಸುಖಾಂತ್ಯವಾಗಿ ಬಗೆಹರಿಸಿಕೊಳ್ಳುವುದು ಮೇಲು. ಮಧುಮೇಹಿಗಳು ತುಸು ಜಾಗ್ರತೆಯಿಂದಿರುವುದು ಲೇಸು. ಸೋಮ, ಶುಕ್ರ, ಶನಿ, ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಅಸಾಧ್ಯವಾಗಿದ್ದ ಕಾರ್ಯವನ್ನು ಸಾಧಿಸಿ ನಿಮ್ಮ ಎದುರಾಳಿಗೆ ಅಚ್ಚರಿ ಮೂಡಿಸುವಿರಿ. ಖಾಸಗಿ ಕಂಪನಿ ನೌಕರರು ತಮ್ಮ ಸಹೋದ್ಯೋಗಿಗಳ ನೆರವಿನಿಂದ ಮಾತ್ರ ಮೇಲಾಧಿಕಾರಿಗಳ ನಿಂದನೆಯಿಂದ ಪಾರಾಗಲು ಸಾಧ್ಯ. ವ್ಯವಹಾರದಲ್ಲಿ ಉಂಟಾದ ವ್ಯತ್ಯಾಸವನ್ನು ಸರಿಪಡಿಸಲು ನೀವು ಬಹಳ ತಿರುಗಾಡಬೇಕಾಗುತ್ತದೆ. ಇದು ಅನಿವಾರ್ಯ. ಮಹತ್ವಾಕಾಂಕ್ಷೆಯೊಂದಿಗೆ ರಾಜಕೀಯ ಪ್ರವೇಶಿಸಲು ಇಚ್ಛಿಸುವವರು ಯೋಚಿಸಿ ನಿರ್ಧಾರಕ್ಕೆ ಬರುವುದು ಉತ್ತಮ. ಪ್ರತಿಯೊಬ್ಬರನ್ನೂ ಸಂತೋಷಪಡಿಸುವ ವಿಚಾರವನ್ನು ಬಿಡುವುದರಿಂದ ಮಾತ್ರ ಮಾನಸಿಕ ನೆಮ್ಮದಿ, ಲಲಿತ ಸಹಸ್ರನಾಮ ಪಾರಾಯಣ ಮಾಡಿ. ಭಾನು-ಬುಧ-ಗುರು-ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ : 27-6-2021 ನೇ ಭಾನುವಾರ ಸಂಕಷ್ಟ ಚತುರ್ಥಿ, ಚಂದ್ರೋದಯ ರಾತ್ರಿ 9-45 ಕ್ಕೆ.**

# 3ರೈತ ವಿರೋಧಿ ಕೃಷಿ ಕಾನೂನುಗಳನ್ನು ರದ್ದುಪಡಿಸಲು ಆಗ್ರಹ




**ಸಂಯುಕ್ತ ಹೋರಾಟ - ಕರ್ನಾಟಕದ ವತಿಯಿಂದ ನಗರದಲ್ಲಿ ಪ್ರತಿಭಟನೆ**

ದಾವಣಗೆರೆ, ಜೂ.26- ಮೂರು ರೈತ ವಿರೋಧಿ ಕೃಷಿ ಕಾನೂನುಗಳನ್ನು ರದ್ದುಪಡಿಸುವುದು ಮತ್ತು ರೈತರಿಗೆ ಎಂಎಸ್‌ಪಿ ನೀಡಲು ಕಾನೂನು ಖಾತರಿ ಪಡೆಯುವುದಕ್ಕೆ ಸಂಬಂಧಿಸಿದಂತೆ ಒತ್ತಾಯಿಸಿ ಸಂಯುಕ್ತ ಹೋರಾಟ - ಕರ್ನಾಟಕ (ರೈತ, ದಲಿತ, ಕಾರ್ಮಿಕ, ವಿದ್ಯಾರ್ಥಿ, ಯುವಜನ, ಮಹಿಳಾ ಸಂಘಟನೆಗಳ ಸಮನ್ವಯ ಸಮಿತಿ) ದಿಂದ ಇಂದು ನಗರದಲ್ಲಿ ಪ್ರತಿಭಟಿಸಲಾಯಿತು.

ತಹಶೀಲ್ದಾರರ ಕಛೇರಿ ಮುಂದೆ ಜಮಾಯಿಸಿದ್ದ ಸಂಘಟನೆಯ ಪದಾಧಿಕಾರಿಗಳು, ಕೃಷಿಯನ್ನು ಉಳಿಸಿ ಪ್ರಜಾಪ್ರಭುತ್ವವನ್ನು ರಕ್ಷಿಸಿ ಎಂಬ ಘೋಷಣೆಯೊಂದಿಗೆ ಕೇಂದ್ರ, ರಾಜ್ಯ ಸರ್ಕಾರಗಳ ರೈತ, ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೊರೊನಾ ವೈರಸ್ ಸಾಂಕ್ರಾಮಿಕ ಸಮಯದಲ್ಲಿ ಆರ್ಥಿಕತೆಯ ಇತರೆ ಕ್ಷೇತ್ರಗಳು ಕ್ಷೀಣಿಸಿದವು ಮತ್ತು ಕುಸಿದವು. ಆದರೂ ಕೃಷಿಯಲ್ಲಿ ದಾಖಲೆಯ ಉತ್ಪಾದನೆಯನ್ನು ಸಾಧಿಸಲಾಗಿದೆ. ಜೀವವನ್ನೇ ಪಣಕ್ಕಿಟ್ಟು ಬೆಳೆದ ಧಾನ್ಯಗಳು ಗೋದಾಮುಗಳಲ್ಲಿ ತುಂಬಿ ಹರಿಯುವುದನ್ನು ಖಾತ್ರಿಪಡಿಸಲಾಗಿದೆ. ಇಡೀ ದೇಶಕ್ಕೆ ಒದಗಿಸಿದ ಈ ರೀತಿಯ ಸೇವೆಗೆ ಪ್ರತಿಯಾಗಿ ನಿಮ್ಮ ಒಪ್ಪಿಗೆಯ ಮುದ್ರೆ ಮೇಲೆ ನಡೆಸಲ್ಪಡುವ ಭಾರತ ಸರ್ಕಾರವು ಮೂರು ರೈತ ವಿರೋಧಿ ಕರಾಳ ಕಾನೂನುಗಳನ್ನು ಹೇರಿದೆ. ಅವುಗಳು ಕೃಷಿಯನ್ನು ಮತ್ತು ರೈತ ಸಮೂಹದ ಮುಂದಿನ ಪೀಳಿಗೆಗಳನ್ನು ನಾಶಪಡಿಸುತ್ತವೆ. ಇವು ಕೃಷಿಯನ್ನು ರೈತರ ಕೈಯಿಂದ ಕಸಿದುಕೊಂಡು ದೊಡ್ಡ ಕಾರ್ಪೊರೇಟ್ ಸಂಸ್ಥೆಗಳಿಗೆ ಹಸ್ತಾಂತರಿಸುವ ಕಾನೂನುಗಳು. ಇದಲ್ಲದೆ ಇತರೆ ಕೆಲವು ಕಾನೂನಿನ ಕತ್ತಿಗಳು ತಲೆಯ ಮೇಲೆ ತೂಗುತ್ತಿವೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ದೆಹಲಿಯ ವಾಯು ಮಾಲಿನ್ಯಕ್ಕೆ ಸಂಬಂಧಿಸಿದ ಹೊಸ ಸುಗ್ರೀವಾಜ್ಞೆಯಲ್ಲಿ ಹುಲ್ಲನ್ನು ಸುಡುವುದಕ್ಕಾಗಿ ದಂಡ ಮತ್ತು ಜೈಲು ಶಿಕ್ಷೆ ವಿಧಿಸಲಾಗುತ್ತದೆ ಮತ್ತು ವಿದ್ಯುತ್ ತಿದ್ದುಪಡಿ ಮಸೂದೆ-2020 ರ ಮೂಲಕ ಸಬ್ಸಿಡಿ ಹಿಂಪಡೆಯಲಾಗುತ್ತಿದೆ. ಮೂರು ಕೇಂದ್ರ ಕೃಷಿ ಕಾನೂನುಗಳು ಅಸಂವಿಧಾನಿಕ. ಮಾರುಕಟ್ಟೆಗಳ ವಿಷಯದಲ್ಲಿ ಶಾಸನ ಮಾಡಲು ಕೇಂದ್ರ ಸರ್ಕಾರಕ್ಕೆ ಯಾವುದೇ ಅಧಿಕಾರವಿಲ್ಲ. ಈ ಶಾಸನಗಳು ಪ್ರಜಾಪ್ರಭುತ್ವ ವಿರೋಧಿ. ಅಂತಹ ಕಾನೂನುಗಳನ್ನು ರಚಿಸುವ ಮೊದಲು, ರೈತರೊಂದಿಗೆ ಸಮಾಲೋಚನೆ ಮತ್ತು ಸಂವಾದಗಳನ್ನು ನಡೆಸಲಾಗಿಲ್ಲ. ಸರಿಯಾದ ಕಾರಣ ಕೇಳದೆ ಮತ್ತು ವಿವರಣೆ ನೀಡದೆ, ಇವುಗಳನ್ನು ರಹಸ್ಯವಾಗಿ ಸುಗ್ರೀವಾಜ್ಞೆ ರೂಪದಲ್ಲಿ ತರಲಾಯಿತು ಎಂದು ಆಕ್ಷೇಪಿಸಿದರು.

ಸ್ವಾಮಿನಾಥನ್ ಆಯೋಗದ ಸೂತ್ರವನ್ನು ಬಳಸಿಕೊಂಡು ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನಿಗದಿಪಡಿಸಬೇಕು ಮತ್ತು ಅಂತಹ ಎಂಎಸ್‌ಪಿಯನ್ನು ಎಲ್ಲಾ ರೈತರಿಗೆ ಕಾನೂನಿನ ಚೌಕಟ್ಟಿನಲ್ಲಿ ಖಾತರಿಪಡಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಎಚ್.ಜಿ. ಉಮೇಶ್, ಹೊನ್ನೂರು ಮುನಿಯಪ್ಪ, ಹುಚ್ಚವ್ವನಹಳ್ಳಿ ಮಂಜುನಾಥ್, ಮಧು ತೊಗಲೇರಿ, ಶ್ರೀನಿವಾಸ್, ಮಂಜುನಾಥ್ ಕುಕ್ಕುವಾಡ, ಆನಂದ್ ರಾಜ್, ಐರಣಿ ಚಂದ್ರು, ರಂಗನಾಥ್, ತಿಪ್ಪೇಸ್ವಾಮಿ ಅಣಬೇರು, ಶ್ರೀನಿವಾಸ್, ಮಹಮ್ಮದ್ ರಫೀಕ್, ಲಿಂಗರಾಜ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

## ರಾಷ್ಟ್ರೋತ್ಥಾನ ಶಾಲೆಯಲ್ಲಿ ಆಕ್ಸಿಜನ್ ಕಾನ್ಸಂಟ್ರೇಟರ್ ಉದ್ಘಾಟನೆ



ದಾವಣಗೆರೆ, ಜೂ.26- ನಗರದ ರಾಷ್ಟ್ರೋತ್ಥಾನ ಶಾಲೆಯಲ್ಲಿ ಕೋವಿಡ್ - 19 ಆಕ್ಸಿಜನ್ ಕಾನ್ಸಂಟ್ರೇಟರ್ ಉದ್ಘಾಟನೆಯಲ್ಲಿ ಪಾಲಿಕೆಯ ಮಹಾಪೌರ ಎಸ್.ಟಿ.ವೀರೇಶ್ ಅವರು ಪಾಲ್ಗೊಂಡಿದ್ದರು.

## ದಾರಿ ತಪ್ಪಿದ ರಾಷ್ಟ್ರೀಯ ಶಿಕ್ಷಣ ನೀತಿ

**ಕನ್ನಡಿಗರು ಹೋರಾಡಬೇಕಿದೆ**

ದಾವಣಗೆರೆ, ಜೂ.26- ನಮ್ಮ ಕನ್ನಡ ಭಾಷೆಗೆ 8 ಜ್ಞಾನಪೀಠ ಪ್ರಶಸ್ತಿಗಳು ಲಭಿಸಿದ್ದರೂ, ಅನ್ಯಾಯವಾಗುತ್ತಲೇ ಇದೆ. ಸಂವಿಧಾನದ ಪ್ರಕಾರ ಇದು ಸಮವರ್ತಿಯಲ್ಲಿ ಬರುವ ತಾರ್ಕಿಕ ವಿಷಯವಾಗಿದ್ದು, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಚರ್ಚಿಸಿ, ಸದನದಲ್ಲಿ ಅನುಮೋದನೆ ಪಡೆದು, ರಾಷ್ಟ್ರಪತಿಯವರು ಸಹಿ ಹಾಕಿದ ನಂತರ ಶಿಕ್ಷಣ ನೀತಿ ಜಾರಿಗೆ ಬರುವುದು. ಇದನ್ನು ಮರೆತು ಏಕಪಕ್ಷೀಯ ನಿರ್ಧಾರವನ್ನು ಸರ್ಕಾರ ಮಾಡುತ್ತಿರುವುದು ಸರಿಯಲ್ಲ. ಇದರಿಂದ ಕನ್ನಡಿಗರಿಗೆ ಮತ್ತು ಕನ್ನಡ ಭಾಷೆಗೆ ಅನ್ಯಾಯ ವಾಗುತ್ತಲೇ ಇದೆ.

ಇದೇ ರೀತಿ ಕನ್ನಡ ಭಾಷೆಯ ಮೇಲೆ ಗದಾ ಪ್ರಹಾರ ನಡೆಸಿದ ರಾಷ್ಟ್ರ ವಿರೋಧಿ ನೀತಿ ವಿರುದ್ಧ ಕನ್ನಡಿಗರು ಹೋರಾಡಬೇಕಿದೆ ಎಂದು ಹಿರಿಯ ಕನ್ನಡಪರ ಹೋರಾಟಗಾರ ಎನ್. ರಾಜೇಂದ್ರ ಬಂಗೇರಾ ಹೇಳಿದ್ದಾರೆ.

## ಹಿಮೊಫಿಲಿಯಾ ಬಾಧಿತರಿಗೆ ಕೋವಿಡ್ ಲಸಿಕಾ ಅಭಿಯಾನ



ದಾವಣಗೆರೆ, ಜೂ.26- ಕರ್ನಾಟಕ ಹಿಮೊಫಿಲಿಯಾ ಸೊಸೈಟಿಯಲ್ಲಿ ಹಿಮೊಫಿಲಿಯಾ ಬಾಧಿತರಿಗಾಗಿ ಕೋವಿಡ್ ಲಸಿಕಾ ಅಭಿಯಾನ ನಡೆಯಿತು. 18 ವರ್ಷ ಮೇಲ್ಪಟ್ಟ ಹಿಮೊಫಿಲಿಯಾ ಬಾಧಿತರಿಗೆ ಹಾಗೂ ಅವರ ಆರೈಕೆದಾರರಿಗೆ ಲಸಿಕೆ ನೀಡಲಾಯಿತು. ಹಿಮೊಫಿಲಿಯಾ ನ್ಯೂನತೆಯು ರಕ್ತಸ್ರಾವ ರೋಗವಾಗಿರುವುದರಿಂದ ಹಿರಿಯ ವೈದ್ಯ ಡಾ. ಸುರೇಶ್ ಹನಗವಾಡಿ ಮಾರ್ಗದರ್ಶನದಲ್ಲಿ ಮುನ್ನೆಚ್ಚರಿಕೆ ಹಾಗೂ ಸುರಕ್ಷಿತವಾಗಿ ಕೋವಿಡ್ ಲಸಿಕಾ ಅಭಿಯಾನವನ್ನು ಆಯೋಜಿಸಲಾಗಿತ್ತು.

ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಮೀನಾಕ್ಷಿ, ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯ ರಕ್ತ ಭಂಡಾರದ ಅಧಿಕಾರಿ ಡಾ. ಗೀತಾ ಮತ್ತು ತಂಡದವರು, ಸ್ತ್ರೀರೋಗ ತಜ್ಞರಾದ ಡಾ. ಶಾಂತಾಭಟ್ ಲಸಿಕಾ ಅಭಿಯಾನ ಆಯೋಜಿಸಿ, ಸಕ್ರೀಯವಾಗಿ ಪಾಲ್ಗೊಂಡಿದ್ದರು.

ಸಂಸ್ಥೆಯ ಅಧ್ಯಕ್ಷ ಡಾ. ಸುರೇಶ್ ಹನಗವಾಡಿ, ಉಪಾಧ್ಯಕ್ಷ ಡಾ. ಬಿ.ಟಿ. ಅಚ್ಯುತ್, ಕಾರ್ಯನಿರ್ವಾಹಕ ನಿರ್ದೇಶಕ ಡಾ. ಜಿ.ಸಿ. ಸದಾಶಿವಪ್ಪ, ಸಂಸ್ಥೆಯ ಲೈಫ್‌ಲೈನ್ ರಕ್ತ ಭಂಡಾರದ ಮುಖ್ಯ ಅಧಿಕಾರಿ ಡಾ. ಎಂ.ಎಂ. ದಡ್ಡಿಕೊಪ್ಪದ್, ಮಹಿಳಾ ವಿಭಾಗದ ಅಧ್ಯಕ್ಷರಾದ ಡಾ. ಮೀರಾ ಹನಗವಾಡಿ, ಕಾರ್ಯನಿರ್ವಾಹಕ ಅಧಿಕಾರಿಗಳಾದ ನವೀನ್ ಹವಳಿ ಮತ್ತಿತರರು ಹಾಜರಿದ್ದರು.

## ನೆಹರು ಕುಟುಂಬದ ಅಧಿಕಾರ ದಾಹದಿಂದ ದೇಶ ವಿಭಜನೆ



**ಹರಪನಹಳ್ಳಿ ಶಾಸಕ ಜಿ. ಕರುಣಾಕರ ರೆಡ್ಡಿ**

ಹರಪನಹಳ್ಳಿ, ಜೂ.26- ನೆಹರು ಕುಟುಂಬದವರ ಅಧಿಕಾರ ದಾಹದಿಂದ ದೇಶ ಅಂದು ವಿಭಜನೆಯಾಯಿತು. ಇನ್ನು ಸ್ವಲ್ಪ ವರ್ಷಗಳು ಕಾದಿದ್ದರೆ ಅಖಂಡವಾಗಿಯೇ ದೇಶಕ್ಕೆ ಸ್ವಾತಂತ್ರ್ಯ ದೊರೆಯುತ್ತಿತ್ತು ಎಂದು ಶಾಸಕ ಜಿ. ಕರುಣಾಕರ ರೆಡ್ಡಿ ಹೇಳಿದರು.

ಪಟ್ಟಣದ ತಾಲ್ಲೂಕು ಬಿಜೆಪಿ ಕಛೇರಿಯಲ್ಲಿ ಇಂದು ಆಯೋಜಿಸಲಾಗಿದ್ದ ತುರ್ತು ಪರಿಸ್ಥಿತಿ ಕರಾಳ ದಿನ ಕಾರ್ಯಕ್ರಮದಲ್ಲಿ ಪೇಂಟ್ ಕಾರ್ಮಿಕರಿಗೆ ಪೇಂಟ್ ಕಿಟ್ ವಿತರಿಸಿ, ಬಳಿಕ ಅವರು ಮಾತನಾಡಿದರು.

ದೇಶದಲ್ಲಿ 1975ರಲ್ಲಿ ಇಂದಿರಾ ಗಾಂಧಿ ಆಡಳಿತದಲ್ಲಿ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಲಕ್ಷಾಂತರ ದೇಶಭಕ್ತರ ಬಲಿದಾನವಾಯಿತು. ನೆಹರು ನಂತರ ಪ್ರಧಾನಿಯಾದ ಇಂದಿರಾ ಗಾಂಧಿ ಕಾಲದಲ್ಲಿ ಭಾರೀ ಪ್ರಮಾಣದ ಭ್ರಷ್ಟಾಚಾರ, ನಿರುದ್ಯೋಗ ಸಮಸ್ಯೆ, ಸ್ವಜನ ಪಕ್ಷಪಾತದ ಆಡಳಿತ ನಡೆದಿದ್ದರಿಂದ ಸಾರ್ವಜನಿಕರು ರೊಚ್ಚಿಗೇಳುವಂತಾಯಿತು. ಇಂದಿರಾ ಗಾಂಧಿ ಅಧಿಕಾರಕ್ಕಾಗಿ ಕಾನೂನನ್ನು ಬಳಸಿ, ಮಧ್ಯರಾತ್ರಿ ದೇಶಕ್ಕೆ ತುರ್ತು ಪತಿಸ್ಥಿತಿ ಹೇರಿದರು. ಅಂದಿನ ವಿರೋಧ ಪಕ್ಷದ ನಾಯಕರಾಗಿದ್ದ ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ. ಅಡ್ವಾಣಿ ಮೊದಲಾದ ನಾಯಕರನ್ನು ರಾತ್ರೋರಾತ್ರಿ ಬಂಧಿಸಲಾಯಿತು ಎಂದು ಅಂದಿನ ಘಟನೆಯನ್ನು ವಿವರಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಬಿಜೆಪಿ ಅಧ್ಯಕ್ಷ ಸತ್ತೂರು ಹಾಲೇಶ್, ಜಿಲ್ಲಾ ಮುಖಂಡರಾದ ಎಂ.ಪಿ. ನಾಯ್ಕ, ಬಾಗಳಿ ಕೊಟ್ರಪ್ಪ, ತಾ.ಪಂ.ಉಪಾಧ್ಯಕ್ಷ ಎಲ್. ಮಂಜ್ಯಾನಾಯ್ಕ, ತಾಲ್ಲೂಕು ಬಿಜೆಪಿ ಉಪಾಧ್ಯಕ್ಷ ಸಣ್ಣ ಹಾಲಪ್ಪ, ಆರ್. ಲೋಕೇಶ್, ಶಿರಗಾನಹಳ್ಳಿ ವಿಶ್ವನಾಥ್, ಪುರಸಭೆ ಅಧ್ಯಕ್ಷ ಮಂಜುನಾಥ್ ಇಂಜತ್ಕರ್, ಬಿ.ವೈ. ವೆಂಕಟೇಶ್ ನಾಯ್ಕ, ನೀಲಗುಂದ ಮನೋಜ್, ಎಂ. ಮಲ್ಲೇಶ್, ರಾಘವೇಂದ್ರ ಶೆಟ್ಟಿ, ಸಂತೋಷ್, ನಾಗೇಶ್, ತಿಮ್ಮಪ್ಪ, ಕೊಟ್ರೇಶ್ ಇನ್ನಿತರರಿದ್ದರು.

## ಕಾನೂನು ಪದವೀಧರರಿಗೆ ತರಬೇತಿ

ದಾವಣಗೆರೆ, ಜೂ.26- ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾ ಖೆಯು ಪ್ರಸಕ್ತ ಸಾಲಿನಲ್ಲಿ ಆಡಳಿತ ನ್ಯಾಯಾಧೀಕರಣದಲ್ಲಿ ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ತರಬೇತಿ ನೀಡಲು ಕಾನೂನು ಪದವಿ ಹೊಂದಿದ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ ಪರಿಶಿಷ್ಟ ಪಂಗಡದ ಕಾನೂನು ಪದವೀಧರರನ್ನು ಆಡಳಿತ ನ್ಯಾಯಾಧೀಕರಣ ತರಬೇತಿ ನೀಡಲಾಗುತ್ತದೆ. ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಜುಲೈ 1 ರಿಂದ ಆಗಸ್ಟ್ 14 ರ ಒಳಗಾಗಿ www.tw.kar.nic.in ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

## ನಗರದಲ್ಲಿ ಎ-ನೆಕ್ ಪ್ರಕರಣ ಪತ್ತೆ

**(1ನೇ ಪುಟದಿಂದ)** ಇಮೋಗ್ಲೋಬಿನ್ ಇಂಜೆಕ್ಷನ್ ಅನ್ನು ಮಗುವಿನ ದೇಹದ ತೂಕಕ್ಕೆ ಅನುಗುಣವಾಗಿ ಒಂದು ಕೆಜಿಗೆ 2 ಗ್ರಾಂನಂತೆ ನೀಡಬೇಕಾಗುತ್ತದೆ ಎಂದು ಎಸ್. ಎಸ್. ಆಸ್ಪತ್ರೆಯ ಮಕ್ಕಳ ತಜ್ಞ ಕಾಳಪ್ಪನವರ್ ಮಾಹಿತಿ ನೀಡಿದರು.

ಪಾಲಕರು ಮಕ್ಕಳಿಗೆ ಕೋವಿಡ್ ಪರೀಕ್ಷೆ ಮಾಡಿಸಬೇಕು, ಜ್ವರ ಬಂದಾಗ ಬಹಳಷ್ಟು ಪೋಷಕರು ಪರೀಕ್ಷೆ ಮಾಡಿಸಲ್ಲ. ಮಾಡಿಸಿದರೆ ಗೊತ್ತಾಗಲಿದೆ.

ಕೋವಿಡ್ ಬಂದು ಹೋದ ಮಕ್ಕಳಲ್ಲಿ ಇದು ಕಾಣಿಸಲಿದೆ. ಮಕ್ಕಳಿಗೆ ಕೋವಿಡ್ ಬಾರದಂತೆ ನೋಡಿಕೊಳ್ಳಬೇಕಾದರೆ ಪಾಲಕರು ಚುಚ್ಚು ಮದ್ದು ಹಾಕಿಸಿಕೊಳ್ಳಬೇಕು, ಮಗುವಿಗೆ ಜ್ವರ ಬಂದಾಗ ತಕ್ಷಣ ವೈದ್ಯರ ಬಳಿ ತಪಾಸಣೆ ಒಳಪಡಿಸಿದಾಗ ಅದನ್ನು ಕಂಡು ಹಿಡಿಯುವರು.

ಅಸ್ತಮಾ, ಡಯಾಬಿಟೀಸ್, ಅಪೌಷ್ಟಿಕತೆ ಮಕ್ಕಳಲ್ಲಿ ಇಂತಹ ಕಾಯಿಲೆ ಬರಲಿದೆ. ನಮ್ಮಲ್ಲಿ ಇದಕ್ಕೆ ಚಿಕಿತ್ಸೆ ನೀಡಲಾಗುವುದು. ಲಕ್ಷಣ ಕಂಡು ಬಂದ ಮಕ್ಕಳನ್ನು ಬೇಗ ವೈದ್ಯರಿಗೆ ತೋರಿಸಿ ಚಿಕಿತ್ಸೆ ಸಿಗಲಿದೆ ಎಂದು ಹೇಳಿದರು.

ಸರ್ಕಾರದ ಗಮನ ಸೆಳೆದು ಸಿ.ಜಿ. ಆಸ್ಪತ್ರೆಯಲ್ಲಿ ಚಿಕಿತ್ಸೆ ಸಿಗುವಂತೆ ಮಾಡುವುದಾಗಿ ಆಸ್ಪತ್ರೆಗೆ ಭೇಟಿ ನೀಡಿದಾಗ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ ಎಂದರು.

## ನಕಲಿ ಕಿಸಾನ್ ಟಿಕಾಯಿತ್‌ನನ್ನು ಜೈಲಿಗೆ ಹಾಕಬಾರದೇಕೆ ?

**ಎಂ.ಎಸ್.ಕೆ. ಶಾಸ್ತ್ರಿ**

ದಾವಣಗೆರೆ, ಜೂ.26- ನಕಲಿ ಕಿಸಾನ್ ರೈತ ಮುಖಂಡ ಟಿಕಾಯಿತ್ ನೇತೃತ್ವದಲ್ಲಿ ಉತ್ತರ ಪ್ರದೇಶದ ಲಕ್ಷಾಂತರ ರೈತರು ಟ್ರ್ಯಾಕ್ಟರ್ ಮೇಲೆ ಕುಳಿತುಕೊಂಡು ಪಾರ್ಲಿಮೆಂಟ್ ಭವನಕ್ಕೆ ಮುತ್ತಿಗೆ ಹಾಕುವರು ಎಂಬ ವರದಿಯನ್ನು ನ್ಯೂಸ್ ಚಾನಲ್ಲೊಂದು ಬಿತ್ತರಿಸಿದ್ದು, ಕೇಂದ್ರದ ಗೃಹ ಮಂತ್ರಿಗಳು ಟಿಕಾಯಿತ್‌ನನ್ನು ಏಕೆ ಬಂಧಿಸಬಾರದು ಎಂದು ಕರ್ನಾಟಕ ಪ್ರದೇಶ ರೈತ ಸಂಘದ ಅಧ್ಯಕ್ಷ ಎಂ.ಎಸ್.ಕೆ. ಶಾಸ್ತ್ರಿ ಪ್ರಶ್ನಿಸಿದ್ದಾರೆ.

ಈಗಾಗಲೇ ಟಿಕಾಯಿತ್ ಗುಂಪಿನವರು ಜ.26ರಂದು ನವದೆಹಲಿಯ ಕೆಂಪು ಕೋಟೆಗೆ ಲಗ್ಗೆ ಹಾಕಿ ಇಡೀ ಭಾರತಕ್ಕೆ ಕಪ್ಪುಚುಕ್ಕೆ ಅಂಟಿಸಿರುವುದನ್ನು ಭಾರತದ ಜನತೆ ನೋಡಿದೆ. ಇವರೆಲ್ಲರೂ ನವದೆಹಲಿಯ ಗಾಜಿಪುರ ಬಾರ್ಡರ್ ಮತ್ತು ಟಿಕ್ರಿ ಬಾರ್ಡರ್‌ಗೆ ಸಮೀಪಿಸುವ ಮುನ್ನವೇ ಬಂಧಿಸಿ, ಜೈಲಿನಲ್ಲಿಡಬೇಕಾಗಿ ಶಾಸ್ತ್ರಿ ಮನವಿ ಮಾಡಿದ್ದಾರೆ.

**ಮೆಕ್ಕೆಜೋಳ ಬೆಳೆದ ರೈತರಿಗೆ ಪ್ರೋತ್ಸಾಹ ಧನ ನೀಡಿ:** ಈಗಾಗಲೇ ರೈತರು ಮೆಕ್ಕೆಜೋಳವನ್ನು 1,200 ರೂ. ದರದಲ್ಲಿ ಮಾರಿದ್ದಾರೆ. ಇತ್ತೀಚೆಗೆ ಮೆಕ್ಕೆಜೋಳದ ದರವು ಪ್ರತಿ ಕ್ವಿಂಟಾಲ್‌ಗೆ 2,050 ರೂ. ಆಗಿರುತ್ತದೆ. ನೊಂದ ಸಣ್ಣ ಮತ್ತು ಅತೀ ಸಣ್ಣ ರೈತರಿಗಾದರೂ 2,500 ರೂಪಾಯಿಗಳನ್ನು ನಷ್ಟ ಭರಿಸುವುದಕ್ಕಾಗಿ ಪ್ರೋತ್ಸಾಹ ಧನವನ್ನು ನೀಡಬೇಕಾಗಿ ರೈತ ಸಂಘ ಮನವಿ ಮಾಡಿದೆ.

## ಓದುಗರ ಪತ್ರ

### ಮೂರನೇ ಅಲೆಯಲ್ಲಿ ಮಕ್ಕಳಿಗೆ ಅಪಾಯವಂತೆ... ಸೂಕ್ತ ಲಸಿಕೆ ಒದಗಿಸದೆ ಶಾಲೆ ಪ್ರಾರಂಭವಂತೆ...

**ಮಾನ್ಯರೇ,**

ಕೋವಿಡ್ ಮೊದಲನೇ ಮತ್ತು ಎರಡನೇ ಅಲೆಯಿಂದ ರಾಜ್ಯದ ಜನ ತತ್ತರಿಸಿ ಹೋಗಿದ್ದಾರೆ, ಆರ್ಥಿಕ ಪರಿಸ್ಥಿತಿ ಹದಗೆಟ್ಟು ಜೀವನ ನಡೆಸುವುದೇ ದುಸ್ತರವಾಗಿದೆ, ಕುಟುಂಬಗಳಲ್ಲಿ ಸಾವು-ನೋವುಗಳ ನಡುವೆ ಬದುಕಿದೆಯಾ ಬಡ ಜೀವ ಎಂಬ ರೀತಿಯಲ್ಲಿ ಜೀವ ಉಳಿದಿದ್ದೇ ಹೆಚ್ಚು ಎಂಬ ಸ್ಥಿತಿಯಲ್ಲಿ ಜನಸಾಮಾನ್ಯರು ಇರುವಾಗ, ಮೂರನೇ ಅಲೆ ಮಕ್ಕಳ ಮೇಲೆ ಎಂದು ಮಾಧ್ಯಮದಲ್ಲಿ ಬಿತ್ತರವಾಗುತ್ತಿರುವುದನ್ನು ನೋಡಿ ಪೋಷಕರು ಚಿಂತಾಕ್ರಾಂತರಾಗಿದ್ದಾರೆ.

ಸರ್ಕಾರ ಇದಕ್ಕೆ ಸೂಕ್ತ ರೀತಿಯ ತಯಾರಿ ನಡೆಸಿಕೊಳ್ಳದೆ, ಖಾಸಗಿ ಶಾಲೆಗಳ ಪ್ರಭಾವಕ್ಕೋ ಅಥವಾ ವೈಯಕ್ತಿಕ ಪ್ರತಿಷ್ಠೆಗೋ ಶಾಲೆ ಪ್ರಾರಂಭಿಸಲು ಹೊರಟಿರುವುದನ್ನು ನೋಡಿದರೆ ಬೇಸರವೆನಿಸುತ್ತದೆ.

ಶಾಲೆ ಪ್ರಾರಂಭಿಸುವುದು ಮಕ್ಕಳ ವಿದ್ಯಾಭ್ಯಾಸದ ದೃಷ್ಟಿಯಿಂದ ಅತ್ಯವಶ್ಯ. ಆದರೆ ಅದಕ್ಕೆ ಸೂಕ್ತ ರೀತಿಯ ವ್ಯವಸ್ಥೆ ಮಾಡಬೇಕಾದದ್ದು ಸರ್ಕಾರದ ಕರ್ತವ್ಯ. ಆದ್ದರಿಂದ ಶೀಘ್ರವೇ ಮಕ್ಕಳಿಗೆ ಮೂರನೇ ಅಲೆಯನ್ನು ತಡೆಯುವ ಶಕ್ತಿ ಇರುವ ಲಸಿಕೆಯನ್ನು ಹಾಕಿಸಲು ವಿನಂತಿ.

ಸರ್ಕಾರ ಶಾಲೆ ಪ್ರಾರಂಭಿಸಲು ಹೊರಟಿರುವುದು ಖಾಸಗಿ ಶಾಲೆ ಯವರ ಪ್ರಭಾವದಿಂದಲೋ ಅಥವಾ ವಿದ್ಯಾರ್ಥಿಗಳ ಹಿತದೃಷ್ಟಿಯಿಂದಲೋ ಎಂಬುದೇ ಯಕ್ಷ ಪ್ರಶ್ನೆಯಾಗಿದೆ.. ಶಾಲೆಯ ಪ್ರಾರಂಭಿಸುವುದಾಗಿ ದಿನಾಂಕ ಪ್ರಕಟಿಸಿ ಪೋಷಕರಿಂದ ಶುಲ್ಕ ಪಾವತಿಸಿಕೊಂಡು ನಂತರ ಮೂರನೇ ಅಲೆ ಎಂಬ ಭೂತ ಬಿಟ್ಟು ಶಾಲೆ ನಿಲ್ಲಿಸದಿದ್ದರೆ ಅಷ್ಟೇ ಸಾಕು.....

**- ಕೆ.ಎಲ್.ಹರೀಶ್ ಬಸಾಪುರ,**
ದಾವಣಗೆರೆ.

### ಪೆಟ್ರೋಲ್ - ಡೀಸೆಲ್ - ಚುಚ್ಚುಮದ್ದು

**ಮಾನ್ಯರೇ,**

ಪ್ರಪಂಚ ಎಲ್ಲಿಂದ ಎಲ್ಲಿಗೋ ಹೋಗುತ್ತಿದೆ. ವಿಜ್ಞಾನ, ತಂತ್ರಜ್ಞಾನ, ಯಂತ್ರಜ್ಞಾನ, ರಾಕೆಟ್, ಮಿಸೈಲ್, ಗ್ರಹ, ಉಪಗ್ರಹ, ಅನುಗ್ರಹ.

ಕಾಯಿಲೆ ಹುಟ್ಟಿಸಿ- ಶಮನದ ಔಷಧ ನೀಡುವುದು.

ತೆರೆದ ಬಾಗಿಲಿನಿಂದ ಅತಿಥಿಯಂತೆ ಬಂದು, ನಂತರದ ದಿನಗಳಲ್ಲಿ ಅಸಹಾಯಕತೆಯ ಸಾವಿನ ಕೊಡುಗೆ ನೀಡಿ, ನಾಟಕದ ಪಾತ್ರದಲ್ಲಿ ತಾನಿಲ್ಲ ಎಂಬಂತೆ ಮಾಯವಾಗುವುದು.

ಎಷ್ಟು ವಿಚಿತ್ರ ಆದರೂ ಸತ್ಯ ಹೌದಲ್ವೋ? ಪ್ರಪಂಚದ ಮೂಲೆ ದೇಶದಲ್ಲಿ ಮೂಲೆಯಲ್ಲಿ ನಿಂತು ಭಾಷಣ ಮಾಡುವವನು ಸಾವಿರಾರು ಲಕ್ಷಾನುಲಕ್ಷ ಕಿಲೋಮೀಟರ್ ದೂರದಲ್ಲಿ ನೋಡುತ್ತಿದ್ದೇವೆ, ಕೇಳುತ್ತಿದ್ದೇವೆ, ಆತನೊಂದಿಗೆ ಮಾತನಾಡಿಸುತ್ತಿದ್ದೇವೆ. ಬೆಂಕಿಪಟ್ಟಣದಷ್ಟಿನ ಯಂತ್ರವನ್ನು ಕೈಯಲ್ಲಿ ಹಿಡಿದು ಅದರಲ್ಲಿಯ ಚಿತ್ರ-ವಿಚಿತ್ರ ಸಂಗತಿಗಳನ್ನು ಕಣ್ಣಮುಂ ದೆಯೇ ವೀಕ್ಷಿಸುತ್ತಿದ್ದೇವೆ. ವಾಯುಮಂಡಲದ ಮೇಲಿರುವ ಯಾವುದೇ ಗ್ರಹದ ಮೇಲೆ ನಿಂತು ಇನ್ನೊಂದು ಗ್ರಹದ ಅನ್ವೇಷಣೆಗೆ ಹಾತೊರೆಯುತ್ತಿದ್ದೇವೆ! ಅಷ್ಟು ಮೇಲ್ಮಟ್ಟಕ್ಕೆ ಹೋಗಿದ್ದೇವೆಯೇ? ಹೋಗಿದ್ದೇವೆ!! ಹೌದಾ! ಆದರೆ, ಪಕ್ಕದಲ್ಲಿಯೇ ಬೀಳುತ್ತಿರುವ ಮಾನವೀಯ ಮೌಲ್ಯಗಳನ್ನು ಮೇಲಕ್ಕೆ ತರಲಾಗದೆ ಚಡಪಡಿಸುತ್ತಿದ್ದೇವೆ!. ವಿಪರ್ಯಾಸ ಅಂದರೆ ಅನ್ವೇಷಣೆಯ ಪ್ರಗತಿಯ ಪೇಟಾ ತೊಡುಗೆಯಲ್ಲಿ ಇನ್ನೊಂದು ಹೆಜ್ಜೆ ಮುಂದೆ ಸಾಗುತ್ತಿದ್ದೇವೆ. ವಾಹನಗಳಿಗೆ, ಯಂತ್ರೋಪಕರಣಗಳಿಗೆ ಇತರೆ ಯಾಂತ್ರಿಕ ಪರಿಕರಗಳಿಗೆ ಪೆಟ್ರೋಲ್ ಮತ್ತು ಡೀಸೆಲ್ ಬಹಳ ಬಳಕೆ ಆಗುತ್ತಿರುವುದಕ್ಕೆ ಚಿಂತಿತರಾಗಿದ್ದೇವೆ. ಪರಿಹಾರದ ರೂಪದಲ್ಲಿ ವಿಶೇಷ ಯೋಜನೆಯನ್ನು ರೂಪಿಸಲು ಸಿದ್ಧರಾಗುತ್ತಿದ್ದೇವೆ. ಮನುಷ್ಯನಿಗೆ ಸ್ವತಃ ಪೆಟ್ರೋಲ್ ಇಂಜೆಕ್ಷನ್, ಡೀಸೆಲ್ ಚುಚ್ಚುಮದ್ದು ಕೊಟ್ಟರೆ ಎಷ್ಟು ದಿನ ಓಡಬಲ್ಲ ಎಂಬ ಹೊಸ ಅನ್ವೇಷಣೆಯಲ್ಲಿ ತೊಡಗಿದ್ದೇವೆ. 2 ಎಂಎಲ್ ಪೆಟ್ರೋಲಿಗೆ 60 ದಿನ ಉಪವಾಸ ನಡಿಗೆ 2 ಎಂಎಲ್ ಡೀಸೆಲ್ ಗೆ 55 ದಿನ ಉಪವಾಸ ನಡಿಗೆ!

ಎಂತಹ ಅದ್ಭುತ ಅನ್ವೇಷಣೆ ನಿಜಕ್ಕೂ ನಿಜಕ್ಕೂ...

ದೇಶದಲ್ಲಿ ಇಲ್ಲಿಯವರೆಗೂ ಸಮಾನತೆಯ ಹಂಚಿಕೆ ಆಗಿದೆ ಎಂದರೆ ಅದು ಪೆಟ್ರೋಲ್ ಮತ್ತು ಡೀಸೆಲ್ ಚುಚ್ಚುಮದ್ದಿನಲ್ಲಿ ಮಾತ್ರ! ಹಾಗಾಗಿ ಮುಂದಿನ ದಿನಗಳಲ್ಲಿ ಯಂತ್ರಗಳ ಬಳಕೆಯೂ ಕಡಿಮೆಯಾಗಬಹುದು.

ಮಾನವರನ್ನೇ ಯಂತ್ರವನ್ನಾಗಿಸಿ ಉಪಯೋಗ ಪಡೆಯಲು ಹೊರಟ ಸರ್ಕಾರ, ಚುಚ್ಚುಮದ್ದಿನ ರೂಪದಲ್ಲಿ ಒಂದು ಎಂ.ಎಲ್, 2 ಎಂ.ಎಲ್, 3 ಎಂ.ಎಲ್........ ಸಾಧನೆಯ ಸಾಧಕರು! ಯಾರಿಗೆ ಎಷ್ಟು ಎಂ.ಎಲ್. ಬೇಕೆನ್ನುವುದು ನಿಮ್ಮ ಎಂಜಿನ್‌ಗೆ ಅನುಗುಣವಾಗಿ ಅಡ್ವಾನ್ಸ್ ಮೆಸೇಜ್ ಬುಕ್ ಮಾಡಿ ಕಳಿಸಿ. ಆಧಾರ್ ಲಿಂಕ್!

**ಕೆ.ಸಿರಾಜ್ ಅಹಮ್ಮದ್,**
ಸಂತೇಬೆನ್ನೂರು.

# ಅಂಗನವಾಡಿ ಕಾರ್ಯಕರ್ತೆಯರನ್ನು ಕೊರೊನಾ ವಾರಿಯರ್ಸ್‌ಗಳೆಂದು ಪರಿಗಣಿಸಲು ಆಗ್ರಹ



ದಾವಣಗೆರೆ, ಜೂ.26- ಎಲ್ಲ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನು ಕೊರೊನಾ ವಾರಿಯರ್ಸ್‌ಗಳೆಂದು ಪರಿಗಣಿಸಿ, ಗುರುತಿನ ಚೀಟಿ ನೀಡುವುದು ಸೇರಿದಂತೆ ಎಂಟು ಬೇಡಿಕೆಗಳನ್ನು ಈಡೇರಿಸಬೇ ಕೆಂದು ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ ನೇತೃತ್ವದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ ಸಚಿವರಾದ ಶ್ರೀಮತಿ ಶಶಿಕಲಾ ಜೊಲ್ಲೆ ಅವರಿಗೆ ಮನವಿ ಸಲ್ಲಿಸಲಾಯಿತು.

ಇಲಾಖೆ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಹಿನ್ನೆಲೆಯಲ್ಲಿ ನಗರಕ್ಕೆ ಆಗಮಿಸಿದ್ದ ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಯಿತು.

ಸೇವಾ ಹಿರಿತನದ ಮೇಲೆ ಗೌರವ ಧನ ಹೆಚ್ಚಿಸಬೇಕು. ನಿವೃತ್ತಿಯಾದ ಮೇಲೆ ಮಾಸಿಕ 6 ಸಾವಿರ ರೂ ಪಿಂಚಣಿ ನೀಡಬೇಕು. ಕೇಂದ್ರ ಸರ್ಕಾರದ ಸಮಿತಿ ಶಿಫಾರಸ್ಸಿನಂತೆ 21 ಸಾವಿರ ರೂ ವೇತನ ನೀಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಐಸಿಡಿಎಸ್ ಕೆಲಸ ಹೊರತುಪಡಿಸಿ ಬೇರೆ ಇಲಾಖೆ ಕೆಲಸಗಳನ್ನು ಮಾಡಿಸಬಾರದು. ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ಅಂಗನವಾಡಿ ಕೇಂದ್ರಗಳಲ್ಲಿ ಪ್ರಾರಂಭಿಸಬೇಕು.

ಆರೋಗ್ಯ ಭತ್ಯೆ ನೀಡಬೇಕು. ಸಾಮಾಜಿಕ ಭದ್ರತಾ ಯೋಜನೆಗಳಾದ ಪಿಎಫ್, ಇಎಸ್‌ಐ, ಗ್ರ್ಯಾಚುಟಿ ಯೋಜನೆಗಳನ್ನು ಜಾರಿಗೊಳಿಸಬೇಕು ಎಂದು ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಫೆಡರೇಶನ್ ರಾಜ್ಯ ಸಂಚಾಲಕರಾದ ಆವರಗೆರೆ ಚಂದ್ರು, ವಾಸು, ಜಿಲ್ಲಾಧ್ಯಕ್ಷೆ ಶಾರದಮ್ಮ, ರೇಣುಕಮ್ಮ, ವಿಶಾಲಾಕ್ಷಿ, ಮಲ್ಲಮ್ಮ ಸೇರಿದಂತೆ ಸಂಘಟನೆಯ ಹಲವು ಕಾರ್ಯಕರ್ತರು ಭಾಗವಹಿಸಿದ್ದರು.

# ಗಾಳಿ ಸುದ್ದಿ: 60 ವರ್ಷದವರ ಲಸಿಕೆ ಕುಂಠಿತ

**60 ವರ್ಷ ಮೀರಿದವರಿಗೆ ಲಸಿಕೆ ತಡವಾಗುತ್ತಿರುವುದಕ್ಕೆ ಆರೋಗ್ಯ ಪರಿಣಿತರು ಕಳವಳ ವ್ಯಕ್ತಪಡಿಸಿದ್ದಾರೆ. ಈ ವಯೋಮಾನದವರು ಕೊರೊನಾ ಸೋಂಕಿಗೆ ಸಿಲುಕುವ ಹಾಗೂ ತೀವ್ರ ಸ್ವರೂಪದ ಸೋಂಕಿಗೆ ಗುರಿಯಾಗುವ ಅಪಾಯ ಹೆಚ್ಚಾಗಿದೆ.**

ನವದೆಹಲಿ ಜೂ 26 – ಆರಂಭದ ಹಂತದಲ್ಲಿ ಚುರುಕಾಗಿದ್ದ 60 ವರ್ಷ ಮೇಲಿನವರ ಲಸಿಕಾ ಪ್ರಕ್ರಿಯೆ ಈಗ ಮಂದವಾಗಿದೆ ಎಂದು ಆರೋಗ್ಯ ಪರಿಣಿತರು ಕಳವಳ ವ್ಯಕ್ತಪಡಿಸಿದ್ದಾರೆ.

ಆರೋಗ್ಯ ಸಚಿವಾಲಯದ ಮಾಹಿತಿಯ ಪ್ರಕಾರ ಹಿರಿಯರಲ್ಲಿ 2.29 ಕೋಟಿ ಜನರು ಎರಡೂ ಡೋಸ್ ಲಸಿಕೆ ಪಡೆದಿದ್ದಾರೆ. 6.71 ಕೋಟಿ ಜನರು ಕೇವಲ ಒಂದು ಡೋಸ್ ಲಸಿಕೆ ಪಡೆದಿದ್ದಾರೆ.

ದೇಶದಲ್ಲಿ ಒಟ್ಟು 14.3 ಕೋಟಿ ಜನರು 60 ವರ್ಷ ಮೀರಿದವರಾಗಿದ್ದಾರೆ. ಒಟ್ಟಾರೆ ಇದುವರೆಗೂ ಶೇ.16ರಷ್ಟು ಜನ ಮಾತ್ರ ಪೂರ್ಣ ಪ್ರಮಾಣದ ಲಸಿಕೆ ಪಡೆದಿದ್ದಾರೆ.

ಮಾರ್ಚ್ 1ರಿಂದ ಕೇಂದ್ರ ಸರ್ಕಾರ 60 ವರ್ಷ ಮೀರಿದವರು ಹಾಗೂ 45 ವರ್ಷ ಮೀರಿದ ಸಹ ಅಸ್ವಸ್ಥತೆ ಉಳ್ಳವರಿಗೆ ಲಸಿಕೆ ನೀಡಲು ಆರಂಭಿಸಿತ್ತು. ಮಾರ್ಚ್ 13ರಿಂದ ಏಪ್ರಿಲ್ 2ರ ನಡುವೆ ಪ್ರತಿ ವಾರಕ್ಕೆ ಸರಾಸರಿ 80.77 ಲಕ್ಷ ಹಿರಿಯರಿಗೆ ಲಸಿಕೆ ನೀಡಲಾಗುತ್ತಿತ್ತು. ಆದರೆ, ಜೂನ್ 5ರಿಂದ 25ರ ನಡುವೆ ಅದು 32 ಲಕ್ಷಕ್ಕೆ ಇಳಿಕೆಯಾಗಿದೆ.

ಕೊರೊನಾ ಲಸಿಕೆಗೆ ಸಂಬಂಧಿಸಿದಂತೆ ತಪ್ಪು ಕಲ್ಪನೆಗಳು ಹಾಗೂ ಗಾಳಿ ಸುದ್ದಿ ಹರಡುತ್ತಿರುವುದೇ ಲಸಿಕೆ ವಿಳಂಬವಾಗಲು ಕಾರಣವಾಗಿದೆ ಎಂದು ಸಿ.ಎಫ್.ಎನ್.ಎಸ್. ಕಾರ್ಯಕಾರಿ ನಿರ್ದೇಶಕ ಡಾ. ಸುಜೀತ್ ರಂಜನ್ ಹೇಳಿದ್ದಾರೆ.

ಕೆಲವರು ತಮಗೆಂದೂ ಕೊರೊನಾ ಸೋಂಕು ಬರುವುದೇ ಇಲ್ಲ ಎಂದು ಭಾವಿಸಿದ್ದಾರೆ. ಇನ್ನು ಕೆಲವರು ಕೊರೊನಾ ಕಡಿಮೆಯಾಗುತ್ತಿದೆ ಎಂದು ಭಾವಿಸಿದ್ದಾರೆ. ಲಸಿಕೆ ಬಗ್ಗೆ ಕೆಲವರು ಅಪನಂಬಿಕೆ ಹೊಂದಿದ್ದಾರೆ. ಸಾಮಾಜಿಕ ಮಾಧ್ಯಮಗಳೂ ಸಹ ಅಪನಂಬಿಕೆ ವೇಗವಾಗಿ ಹರಡಲು ಕಾರಣವಾಗುತ್ತಿವೆ ಎಂದವರು ತಿಳಿಸಿದ್ದಾರೆ.

ಲಸಿಕೆ ಪಡೆದ ಮೂರು ವರ್ಷಗಳ ನಂತರ ಅಡ್ಡ ಪರಿಣಾಮವಾಗಬಹುದು ಎಂದು ಕೆಲವರು ಗಾಳಿ ಸುದ್ದಿ ಹರಡುತ್ತಿದ್ದಾರೆ. ಗ್ರಾಮೀಣ ಭಾಗದ ಕೆಲವರು ಈ ಸೋಂಕು ನಗರದವರಿಗೆ ಮಾತ್ರ ಹೆಚ್ಚು ಎಂದು ಭಾವಿಸಿದ್ದಾರೆ ಎಂದು ರಂಜನ್ ತಿಳಿಸಿದ್ದಾರೆ.

ಹಿರಿಯರಲ್ಲಿ ಲಸಿಕೆ ಕುರಿತ ಹಿಂಜರಿತ ಇರುವುದು ನೈಜ ಸಮಸ್ಯೆಯಾಗಿದೆ. ಈ ಹಿಂದೆ ಹೃದಯ ರೋಗ ಹೊಂದಿದವರು ಲಸಿಕೆಗೆ ಹಿಂಜರಿಯುತ್ತಿದ್ದಾರೆ ಎಂದು ಉಜಾಲಾ ಸೈಗ್ನಸ್ ಆಸ್ಪತ್ರೆ ಸಮೂಹದ ಸ್ಥಾಪಕ ನಿರ್ದೇಶಕ ಡಾ. ಶುಚಿನ್ ಬಜಾಜ್ ಹೇಳಿದ್ದಾರೆ.

ಎಲ್ಲಕ್ಕಿಂತ ಲಸಿಕೆ ತಲುಪಿಸುವುದು ದೊಡ್ಡ ಸಮಸ್ಯೆಯಾಗಿದೆ. ಹಿರಿಯರು ತಾವಾಗಿಯೇ ಲಸಿಕೆ ಪಡೆಯಲು ಗುಂಪು ಹೆಚ್ಚಾಗಿರುವ ಲಸಿಕಾ ಕೇಂದ್ರಕ್ಕೆ ಬರಲು ಬಯಸುವುದಿಲ್ಲ. ಹೀಗಾಗಿ ಮನೆಯ ಬಾಗಿಲಿಗೇ ಲಸಿಕೆ ತಲುಪಿಸುವ ಪ್ರಯತ್ನ ನಡೆಯಬೇಕಿದೆ ಎಂದವರು ಹೇಳಿದ್ದಾರೆ.

## ಜಂಗಮ ಮಹಾಸಭಾದಿಂದ ಲಸಿಕೆ



ದಾವಣಗೆರೆ, ಜೂ.26 - ಅಖಿಲ ಭಾರತೀಯ ಜಂಗಮ ಮಹಾ ಸಭಾದ ವತಿಯಿಂದ ಸುಮಾರು 220 ಪುರೋಹಿತ, ಅರ್ಚಕ, ಮಠಸ್ಥರಿಗೆ ಮತ್ತು ಅವರ ಕುಟುಂಬದವರಿಗೆ ಲಸಿಕೆ ಹಾಕುವ ಕಾರ್ಯಕ್ರಮವು ನಗರದ ಶ್ರೀ ಸದ್ಯೋಜಾತ ಶಿವಾಚಾರ್ಯರ ಹಿರೇಮಠದಲ್ಲಿ ಇಂದು ನಡೆಯಿತು.

ದಾವಣಗೆರೆ-ಹರಿಹರ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಮುರುಗೇಶ್ ಆರಾಧ್ಯ, ರಾಜ್ಯಾಧ್ಯಕ್ಷ ಅರುಣ್ ಕುಮಾರ್ ಜಡಿಮಠ, ಜಿಲ್ಲಾಧ್ಯಕ್ಷ ಡಾ.ಹಾಲಸ್ವಾಮಿ ಕಂಬಾಳಿಮಠ್, ಮಹಿಳಾ ಅಧ್ಯಕ್ಷರಾದ ಶ್ರೀಮತಿ ದ್ರಾಕ್ಷಾಯಣಮ್ಮ, ಹಿರಿಯ ವಕೀಲರಾದ ಶ್ರೀಮತಿ ವಸುಂಧರ, ಸಭಾದ ಪದಾಧಿಕಾರಿಗಳಾದ ಶಶಿಕಲಾ, ಚಂದ್ರಮ್ಮ, ಜೀವನ್, ಕಿರಣ್, ಓಂಕಾರ್ ಮೂರ್ತಿ ಮತ್ತು ಪ್ರಕಾಶ್ ಉಪಸ್ಥಿತರಿದ್ದರು.

ಜಿಲ್ಲಾ ಆರೋಗ್ಯ ಅಧಿಕಾರಿಗಳಾದ ಡಾ.ನಾಗರಾಜ್, ಆರ್.ಸಿ.ಎಚ್, ಡಾ.ಮೀನಾಕ್ಷಿ, ಡಾ. ಮಂಜುಳಾ ಭೇಟಿ ನೀಡಿ ಮಾರ್ಗದರ್ಶನ ಮಾಡಿದರು.

## ಎಐಡಿಎಸ್‌ಓನಿಂದ ಪ್ರತಿಭಟನೆ

ದಾವಣಗೆರೆ, ಜೂ.26- ರಾಜ್ಯಾದ್ಯಂತ ಅಖಿಲ ಕರ್ನಾಟಕ ವಿದ್ಯಾರ್ಥಿಗಳ ಪ್ರತಿಭಟನಾ ದಿನದಲ್ಲಿ ಸಾವಿರಾರು ವಿದ್ಯಾರ್ಥಿಗಳು ಭಾಗವಹಿಸಿ ಪ್ರತಿಭಟನೆ ನಡೆಸಿ, ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು.

ಪದವಿ, ಸ್ನಾತಕೋತ್ತರ ಪದವಿ, ಎಂಜಿನಿಯರಿಂಗ್, ಡಿಪ್ಲೋಮಾ ಹಾಗೂ ಫಾರ್ಮಸಿ ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳ ಫಲಕ ಹಿಡಿದು ಮನೆಗಳಿಂದ, ಕಾಲೇಜುಗಳಿಂದ ವಿವಿಗಳ ಎದುರು ಸಾಂಕೇತಿಕ ಪ್ರತಿಭಟನೆ ನಡೆಸಿ, ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಪದವಿ, ಇಂಜಿನಿಯರಿಂಗ್, ಡಿಪ್ಲೋಮಾ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಕಳೆದ ಸೆಮಿಸ್ಟರ್‌ನ ಪರೀಕ್ಷೆಯನ್ನು ನಡೆಸುತ್ತೇವೆ ಎಂಬ ಅವೈಜ್ಞಾನಿಕ ಮತ್ತು ಅತಾರ್ಕಿಕವಾದ ನಿರ್ಧಾರವನ್ನು ಹಿಂಪಡೆಯಿರಿ. ಸಂಬಂಧಪಟ್ಟವರ ಅಭಿಪ್ರಾಯವನ್ನು ಪಡೆಯದೇ ಏಕಪಕ್ಷೀಯವಾಗಿ ಹಾಗೂ ಅಪ್ರಜಾತಾಂತ್ರಿಕವಾಗಿ ನಿರ್ಧಾರ ತೆಗೆದುಕೊಳ್ಳುವುದನ್ನು ನಿಲ್ಲಿಸಿ, ನೀತಿಗಳನ್ನು ರಚಿಸುವವರೇ ಉತ್ತರಿಸಿ, ವಿದ್ಯಾರ್ಥಿ ಸಮೂಹದ ಮೇಲೆ ವಿಪರೀತ ಹೊರೆ ಹೇರುವುದನ್ನು ನಿಲ್ಲಿಸಿ. ಆಫ್‌ಲೈನ್ ತರಗತಿಗಳು ಆರಂಭವಾಗುವ ಮುನ್ನ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ವ್ಯಾಕ್ಸಿನ್ ನೀಡಿ ಎಂದು ಆಗ್ರಹಿಸಲಾಯಿತು ಎಂದು ಎಐಡಿಎಸ್‌ಓ ಕಾರ್ಯದರ್ಶಿ ಪೂಜಾ ನಂದಿಹಳ್ಳಿ ತಿಳಿಸಿದ್ದಾರೆ.

## ಬಿಸಿಯೂಟ ತಯಾರಕರಿಗೆ ವೇತನ ಬಿಡುಗಡೆಗೆ ಮನವಿ




ದಾವಣಗೆರೆ, ಜೂ.26- ಬಿಸಿಯೂಟ ತಯಾರಕರಿಗೆ ವೇತನ ಬಿಡುಗಡೆ ಮಾಡಬೇಕೆಂದು ರಾಜ್ಯ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಎಐಟಿಯುಸಿ ಸಂಯೋಜಿತ ಫೆಡರೇಷನ್ ರಾಜ್ಯ ಸಮಿತಿಯು ಸರ್ಕಾರಕ್ಕೆ ಮನವಿ ಸಲ್ಲಿಸುವ ಮೂಲಕ ಬೆಂಗಳೂರಿನಲ್ಲಿಂದು ಒತ್ತಾಯಿಸಿದೆ.

ಇಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಸುರೇಶ್ ಕುಮಾರ್ ಅವರನ್ನು ಭೇಟಿ ಮಾಡಿದ ಫೆಡರೇಶನ್ ರಾಜ್ಯ ಪ್ರಧಾನ ಕಾರ್ಯದರ್ಶಿ ಆವರಗೆರೆ ಚಂದ್ರು, ರಾಜ್ಯಾಧಕ್ಷ ಹೊನ್ನಪ್ಪ ಮರೆಮ್ಮನವರ್ ಮನವಿ ಸಲ್ಲಿಸಿದರು.

2021 ಜೂನ್ ತಿಂಗಳ ವೇತನವನ್ನು ಜುಲೈ ಮೊದಲ ವಾರದಲ್ಲಿ ಬಿಡುಗಡೆ ಮಾಡಬೇಕು, ಬಿಸಿಯೂಟ ತಯಾರಕರಿಗೆ ಲಾಕ್‌ಡೌನ್ ಪರಿಹಾರವಾಗಿ ಐದು ಸಾವಿರ ರೂ.ಗಳನ್ನು ಕೊಡಬೇಕು, ಶಾಲೆಗಳನ್ನು ತೆರೆದು ಶಾಲೆಯಲ್ಲಿ ಅಡುಗೆ ತಯಾರಿಸುವುದನ್ನು ಆರಂಭಿಸಬೇಕೆಂದು ಒತ್ತಾಯಿಸಿದರು.

ಬಿಸಿಯೂಟ ತಯಾರಕರ ವಿವಿಧ ಬೇಡಿಕೆಗಳನ್ನು ಚರ್ಚಿಸಲು ಸರ್ಕಾರದ ಮಟ್ಟದಲ್ಲಿ ಸಭೆ ಕರೆಯಬೇಕೆಂದು ಸಚಿವರಿಗೆ ಆಗ್ರಹಿಸಿದರು.

## ಕನ್ನಡ ಭಾಷಾ ಬೋಧನೆ ಅವಧಿ ವಿಸ್ತರಣೆಗೆ ಹಕ್ಕೊತ್ತಾಯ



ದಾವಣಗೆರೆ, ಜೂ.26- ರಾಷ್ಟ್ರೀಯ ನೂತನ ಶಿಕ್ಷಣ ನೀತಿಯಲ್ಲಿ ಸ್ನಾತಕ ಪದವಿ ಶಿಕ್ಷಣದ ಕನ್ನಡ ಭಾಷಾ ವಿಷಯ ಬೋಧನಾ ಅವಧಿಯನ್ನು ವಿಸ್ತರಿಸುವಂತೆ, ದಾವಣಗೆರೆ ವಿಶ್ವವಿದ್ಯಾನಿಲಯ ಕನ್ನಡ ಅಧ್ಯಾಪಕರ ವೇದಿಕೆಯು ಉನ್ನತ ಶಿಕ್ಷಣ ಸಚಿವರಿಗೆ ಹಕ್ಕೊತ್ತಾಯ ಸಲ್ಲಿಸಿದೆ.

ನಾಲ್ಕು ವರ್ಷಗಳ ಸ್ನಾತಕ ಪದವಿಯಲ್ಲಿ ಕನ್ನಡ ಮತ್ತು ಇತರೆ ಭಾಷೆಯ ಕಲಿಕೆಯನ್ನು ಈಗಿರುವಂತೆ ನಾಲ್ಕು ವರ್ಷಗಳ ಕಲಿಕೆಗೆ ವಿಸ್ತರಿಸುವುದು, ಎಲ್ಲಾ ವೃತ್ತಿಪರ ಕೋರ್ಸ್‌ಗಳಲ್ಲಿಯೂ ಕನ್ನಡವನ್ನು ಕನಿಷ್ಟ ಎರಡು ವರ್ಷಗಳ ಅವಧಿಯ ಅಧ್ಯಯನ ಕಡ್ಡಾಯಗೊಳಿಸುವುದು, ಸಾಮರ್ಥ್ಯ ವಿಸ್ತರಣೆ ಮತ್ತು ಕೌಶಲ್ಯಾಭಿವೃದ್ಧಿಯಲ್ಲಿ ಕನ್ನಡ ಭಾಷಾ ಕೌಶಲ್ಯ ಮತ್ತು ಸಾಮರ್ಥ್ಯವನ್ನು ಅಳವಡಿಸಲು ಕ್ರಮ ವಹಿಸುವುದು ಇತ್ಯಾದಿ ಹಕ್ಕೊತ್ತಾಯಗಳನ್ನು ಸಲ್ಲಿಸಿದೆ.

ವೇದಿಕೆಯ ಡಾ. ಕೆ. ಮಲ್ಲಿಕಾರ್ಜುನ್, ಡಾ. ಬಸಪ್ಪ, ಹೆಚ್. ಗಿರಿಸ್ವಾಮಿ, ಡಾ. ನಾರಾಯಣಸ್ವಾಮಿ, ಡಾ. ದಾದಾಪೀರ್ ನವಿಲೇಹಾಳ್, ಡಾ. ಮಂಜಪ್ಪ, ಡಾ. ಹೆಚ್. ವಿಶ್ವನಾಥ್ ಅವರುಗಳು ದಾವಣಗೆರೆ ವಿವಿ ಕುಲಪತಿಗಳ ಮೂಲಕ ಮನವಿ ಸಲ್ಲಿಸಿದರು.

# ಸರಳ ವ್ಯಕ್ತಿತ್ವದ ಮಹಾನ್ ಕಲಾವಿದ ಕೊರ್ತಿ

### ನಿರ್ಭಾವದಿಂದ ಭಾವನೆಗಳನ್ನು ಗೆದ್ದ ಕಲಾವಿದ ಬಿ.ಆರ್.ಕೊರ್ತಿ - ಬಾ.ಮ.ಬಸವರಾಜಯ್ಯ



ದಾವಣಗೆರೆ,ಜೂ.26- ಮೊನ್ನೆ ನಿದನರಾದ ಸ್ಥಳೀಯ ಲಲಿತಕಲಾ ಮಹಾವಿದ್ಯಾಲಯದ ನಿವೃತ್ತ ಅಧ್ಯಾಪಕರೂ, ಹಿರಿಯ ಚಿತ್ರ ಕಲಾವಿದರೂ ಆದ ಬಿ.ಆರ್. ಕೊರ್ತಿ ಅವರಿಗೆ ದಾವಣಗೆರೆ ಕಲಾ ಪರಿಷತ್ತಿನ ಕಛೇರಿಯಲ್ಲಿ ಇಂದು ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸದಾ ಅಂತರ್ಮುಖಿಯಾಗಿದ್ದ ಕೊರ್ತಿ ಅವರು ತನ್ನ ನಿರ್ಭಾವ ಗುಣಗಳಿಂದಲೇ ಭಾವನೆಗಳನ್ನು ಗೆದ್ದ ಕಲಾವಿದರಾಗಿದ್ದರು. ತಮ್ಮ ಭಾವನೆಗಳನ್ನು ತಮ್ಮ ಚಿತ್ರಗಳ ಮೂಲಕವೇ ಹೊರಹಾಕುತ್ತಿದ್ದ ಅದ್ಭುತ ಕಲಾವಿದರಾಗಿದ್ದರು ಎಂದು ಸಾಹಿತಿ - ಪತ್ರಕರ್ತ ಬಾ.ಮ.ಬಸವರಾಜಯ್ಯ ಶ್ಲಾಘಿಸಿದರು.

ಕೊರ್ತಿ ಅವರ ಬಹುಕಾಲದ ಒಡನಾಡಿ ಮತ್ತು ಕಲಾವಿದ ಎ.ಮಹಾಲಿಂಗಪ್ಪ ಮಾತನಾಡಿ, ಕಲಾವಿದರ ವಲಯದಲ್ಲಿ 'ಕುಂಚ ಬ್ರಹ್ಮ' ಎಂದೇ ಹೆಸರಾಗಿದ್ದರು.

ಲಲಿತ ಕಲಾ ಮಹಾ ವಿದ್ಯಾಲಯದಲ್ಲಿ ಸುದೀರ್ಘ ಅವಧಿಗೆ ಗುರುಗಳಾಗಿ, ಮಾರ್ಗದರ್ಶಕರಾಗಿ ಸಾವಿರಾರು ಯುವ ಕಲಾವಿದರುಗಳಿಗೆ ಸ್ಫೂರ್ತಿಯಾಗಿ ದ್ದರು. ಅವರು ಭೌತಿಕವಾಗಿ ನಮ್ಮೊಂದಿಗೆ ಇರದಿದ್ದರೂ ಅವರ ಸಾಧನೆಗಳು ಮತ್ತು ಕಲಾ ಸೇವೆ ಅಜರಾಮರವಾಗಿ ಉಳಿಯಲಿವೆ. ಕಲೆಯ ಆರಾಧಕರಾಗಿದ್ದ ಕೊರ್ತಿಯವರ ಅಗಲುವಿಕೆಯಿಂದಾಗಿ ಚಿತ್ರ ಕಲಾ ಲೋಕವು ಅತ್ಯುತ್ತಮ ಮಾರ್ಗದರ್ಶಕನನ್ನು ಕಳೆದುಕೊಂಡು ಬಡವಾಗಿದೆ ಎಂದು ಭಾವುಕರಾಗಿ ನುಡಿದರು.

ಕರ್ನಾಟಕ ಶಿಲ್ಪ ಕಲಾ ಅಕಾಡೆಮಿಯ ಮಾಜಿ ಸದಸ್ಯ ವೈ.ಕುಮಾರ್, ಚಿತ್ರ ಕಲಾವಿದ ಚಂದ್ರಶೇಖರ್ ಸಂಗಾ, ಚಿತ್ರ ಕಲಾ ಶಿಕ್ಷಕ ಬಿ. ಅಚ್ಯುತಾನಂದ್ ಅವರುಗಳು ಮಾತನಾಡಿ, ತಮ್ಮ ಗುರುಗಳು ತಮ್ಮಲ್ಲಿದ್ದ ಕಲಾ ಜ್ಞಾನದ ಸರ್ವಸ್ವವನ್ನೂ ಶಿಷ್ಯರಿಗೆ ಧಾರೆಯೆರೆದಿದ್ದಾರೆ. ಸಹಸ್ರಾರು ಸಂಖ್ಯೆಯಲ್ಲಿ ಪ್ರತಿಭಾನ್ವಿತ ಶಿಷ್ಯಂದಿರನ್ನು ಸೃಷ್ಟಿಸಿದ್ದಾರೆ ಎಂದು ಹೇಳಿದರು.

ಯಕ್ಷಗಾನ ಕಲಾವಿದ ಕೆ. ರಾಘವೇಂದ್ರ ನಾಯರಿ, ಕೊಳಲು ವಾದಕ ಬಸವರಾಜ ದುರ್ಗದ, ನಿವೃತ್ತ ಚಿತ್ರಕಲಾ ಶಿಕ್ಷಕ ಕಿಶನ್ ರಾವ್ ಲಾಲಗೇರಿ, ಸಂಸ್ಕಾರ ಭಾರತಿಯ ಸದಸ್ಯ ಮತ್ತು ನಿವೃತ್ತ ಪ್ರಾಧ್ಯಾಪಕ ಕೆ.ಆರ್.ಸಿದ್ದಪ್ಪ, ನಿವೃತ್ತ ಚಿತ್ರಕಲಾ ಶಿಕ್ಷಕ ಎಂ.ಎಸ್.ಅಗಡಿ, ಸಂಸ್ಕಾರ ಭಾರತಿಯ ಸದಸ್ಯ ಜೆ. ಪರಮೇಶ್ವರಪ್ಪ, ದಾವಣಗೆರೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮಾಜಿ ಸದಸ್ಯ ಕೊಂಡಜ್ಜಿ ಜಯಪ್ರಕಾಶ್, ಕೊರ್ತಿಯವರ ಬಹುಕಾಲದ ಒಡನಾಡಿ ವಿಠಲ್ ಸಫಾರೆ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ.ದಿಳ್ಯಪ್ಪ ಮತ್ತಿತರರು ಶ್ರದ್ಧಾಂಜಲಿ ಸಭೆಯಲ್ಲಿ ಭಾಗವಹಿಸಿದ್ದರು.

## ಸಂಚಾರಿ ಗಾಡಿ ವ್ಯಾಪಾರಸ್ಥರಿಗೆ, ಬೀದಿ ವ್ಯಾಪಾರಸ್ಥರಿಗೆ ಲಸಿಕಾ ಶಿಬಿರ



ದಾವಣಗೆರೆ, ಜೂ.26- ನಗರ ಸಂಚಾರಿ ಗಾಡಿ ತರಕಾರಿ ವ್ಯಾಪಾಸ್ಥರಿಗೆ ಎಪಿಎಂಸಿ ತರಕಾರಿ ಮಾರುಕಟ್ಟೆ ಆವರಣದಲ್ಲಿ ಜಿಲ್ಲಾಡಳಿತ ಮತ್ತು ಮಹಾನಗರ ಪಾಲಿಕೆ ವತಿಯಿಂದ ಇಂದು ಉಚಿತವಾಗಿ ಲಸಿಕೆ ನೀಡಲಾಯಿತು.

ಎಪಿಎಂಸಿ ಕಾರ್ಯದರ್ಶಿ ಕೆ.ಸಿ. ದೊರೆಸ್ವಾಮಿ, ಎಪಿಎಂಸಿ ಮಾರುಕಟ್ಟೆ ಮೇಲ್ವಿಚಾರಕರಾದ ಬಿ.ಕೆ. ಧನ್ಯಕುಮಾರ್, ಸಂಚಾರಿ ಗಾಡಿ ತರಕಾರಿ ವ್ಯಾಪಾರಸ್ಥರ ಸಂಘದ ಗೌರವ ಅಧ್ಯಕ್ಷ ಎಸ್.ಎನ್ ತಿಪ್ಪೇಸ್ವಾಮಿ, ಅಧ್ಯಕ್ಷ ಎಸ್. ದುಗ್ಗಪ್ಪ, ಖಜಾಂಚಿ ಆರ್. ವಾಸುದೇವ್, ಸಂಘಟನಾ ಕಾರ್ಯದರ್ಶಿ ಹೆಚ್.ಸಿ. ಮಲ್ಲಪ್ಪ, ವೈದ್ಯಾಧಿಕಾರಿ ಸುನೀತ ತೊಂಬೊಂಡೆ ಮತ್ತಿತರರು ಕಾರ್ಯಕ್ರಮದ ಮುಂದಾಳತ್ವ ವಹಿಸಿದ್ದರು.

## ಆಸ್ತಿ ತೆರಿಗೆ ರಿಯಾಯ್ತಿ: ಅವಧಿ ವಿಸ್ತರಣೆ

**ಹರಿಹರ**

ಹರಿಹರ, ಜೂ.26- ನಗರಸಭೆ ವ್ಯಾಪ್ತಿಯಲ್ಲಿ ಬರುವ ಆಸ್ತಿಗಳ ಮೇಲಿನ ಸ್ವಯಂ ಘೋಷಿತ ಆಸ್ತಿ ತೆರಿಗೆ ಪಾವತಿಸಲು ಶೇ.5 ರಷ್ಟು ರಿಯಾಯ್ತಿಯ ಕಾಲಾವಧಿಯನ್ನು ಜುಲೈ 31 ರವರೆಗೆ ವಿಸ್ತರಿಸಲಾಗಿದೆ.ನಿಗದಿತ ಅವಧಿಯೊಳಗೆ ಪಾವತಿಸದೇ ಇದ್ದಲ್ಲಿ ಆಗಸ್ಟ್ 1 ರಿಂದ ಪ್ರತಿ ತಿಂಗಳು ಶೇ.2 ರಷ್ಟು ದಂಡ ವಿಧಿಸಲಾಗುವುದು ಎಂದು ನಗರಸಭೆ ಪೌರಾಯುಕ್ತರಾದ ಎಸ್. ಲಕ್ಷ್ಮಿ ತಿಳಿಸಿದ್ದಾರೆ.

## ವಿಶ್ವ ಮಾದಕ ದ್ರವ್ಯ ನಿಷೇಧ ದಿನಾಚರಣೆ



**ದೇವರಾಜ ಅರಸು ಬಡಾವಣೆ**

ದಾವಣಗೆರೆ, ಜೂ.26 - ವಿಶ್ವ ಮಾದಕ ದ್ರವ್ಯ ನಿಷೇಧ ದಿನಾಚರಣೆಯ ಅಂಗವಾಗಿ 15ನೇ ವಾರ್ಡ್ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನ ಡಾ. ಶಾಮನೂರು ಶಿವಶಂಕರಪ್ಪ ಉದ್ಯಾನವನದ ಹತ್ತಿರ ಮಾದಕ ದ್ರವ್ಯದ ಬಗ್ಗೆ ಜಾಗ್ರತೆ ಮೂಡಿಸುವ ಕಾರ್ಯಕ್ರಮವು ಇಂದು ನಡೆಯಿತು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಬಡಾವಣೆ ಪೊಲೀಸ್ ಠಾಣೆ ಸಿ.ಪಿ.ಐ ಸುರೇಶ್ ಸಗರಿ ಮಾತನಾಡಿ, ಮಾದಕ ದ್ರವ್ಯದಿಂದಾಗುವ ಸಾಧಕ-ಬಾಧಕಗಳ ಬಗ್ಗೆ ಮತ್ತು, ಅದರಿಂದಾಗುವ ಅನಾಹುತಗಳ ಬಗ್ಗೆ ಸಾರ್ವಜನಿಕರಿಗೆ ವಿವರಿಸಿದರು.

ನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಆಶಾ ಉಮೇಶ್, ಆಶ್ರಯ ಸಮಿತಿ ಸದಸ್ಯರಾದ ಅಮೀರಾ ಬಾನು, ಪಿ.ಎಸ್.ಐ ಅರವಿಂದ್, ಎ.ಎಸ್.ಐ ಶಿವಣ್ಣ, ಅಶ್ವತ್, ದಾದಾಪೀರ್, ಶೈಲಜಾ ವೀರೇಶ್, ರುದ್ರೇಶ್, ನಳಿನ, ಪೂಜಾ ಕೆ, ಪ್ರಮೀಳಾ, ನಾಗರಾಜ, ಮಂಜುನಾಥ ಎಸ್.ಜೆ. ಪರ್ವೀನ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಆಯೋಜಿಸಿದ್ದ ಸಮಾಜ ಸೇವಕ ಕೆ. ಎಂ. ವೀರಯ್ಯ ಸ್ವಾಮಿ ಸ್ವಾಗತಿಸಿ, ವಂದಿಸಿದರು.

## ಇಂಧನ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ



ದಾವಣಗೆರೆ, ಜೂ.26- ಕೊರೊನಾ ಸಂಕಷ್ಟ ಕಾಲದಲ್ಲಿ ಜನರಿಗೆ ಅಗತ್ಯವಾಗಿ ಬೇಕಾಗುವ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿರುವುದನ್ನು ಖಂಡಿಸಿ ನಗರದಲ್ಲಿ ಮೊನ್ನೆ ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಜೆಡಿಎಸ್ ಪಕ್ಷದಿಂದ ಪ್ರತಿಭಟನೆ ನಡೆಸಲಾಯಿತು.

ಶ್ರೀ ಜಯದೇವ ಸರ್ಕಲ್‌ನಿಂದ ಅಂಬೇಡ್ಕರ್ ಸರ್ಕಲ್‌ವರೆಗೂ ಮೆರವಣಿಗೆ ನಡೆಸಿದ ಜೆಡಿಎಸ್ ಪದಾಧಿಕಾರಿಗಳು, ಕಾರ್ಯಕರ್ತರು ಅಂಬೇಡ್ಕರ್ ಸರ್ಕಲ್‌ನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಡೀಸೆಲ್ ಹಾಕಿಸಿಕೊಳ್ಳುವ ಗ್ರಾಹಕರಿಗೆ ಸಿಹಿ ನೀಡಿ ವಿನೂತನವಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಮಾತನಾಡಿದ ಮುಖಂಡ ಶ್ರೀಧರ್ ಪಾಟೀಲ್, ಈ ಸಂಕಷ್ಟ ಕಾಲದಲ್ಲಿ ಬೆಲೆ ಏರಿಕೆ ಮಾಡಿದ್ದು ಸಾಮಾನ್ಯ ಜನರಿಗೆ ಹೊರೆ ಯಾಗುತ್ತಿದೆ. ಬೆಲೆ ಏರಿಕೆ ನಿಯಂತ್ರಣ ಮಾಡುವಲ್ಲಿ ಬಿಜೆಪಿ ಸರ್ಕಾರ ವಿಫಲವಾಗಿದೆ. ಬಿಜೆಪಿ ಅಧಿಕಾರಕ್ಕೆ ಬಂದ ದಿನದಿಂದಲೂ ಅಗತ್ಯ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಗಗನಕ್ಕೆ ಏರುತ್ತಿದ್ದರೂ ಸಹ ಕೇಂದ್ರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಮಂಜಣ್ಣ, ವೆಂಕಟೇಶ್ ಸೇರಿದಂತೆ ಇತರರು ಇದ್ದರು.

## ದಾವಣಗೆರೆ-ಹರಿಹರಕ್ಕೆ ಮತ್ತೆರಡು ಆಕ್ಸಿಜನ್ ಜನರೇಟರ್ಸ್

**ಸಂಸದ ಸಿದ್ದೇಶ್ವರ**

ದಾವಣಗೆರೆ, ಜೂ. 26- ನಗರದ ಜಿಲ್ಲಾ ಚಿಗಟೇರಿ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಗೆ ಪ್ರತಿ ನಿಮಿಷಕ್ಕೆ 2000 ಲೀಟರ್ ಸಾಮರ್ಥ್ಯದ ಆಕ್ಸಿಜನ್ ಜನರೇಟರ್ ಹಾಗೂ ನಗರದ ನಿಟ್ಟುವಳ್ಳಿಯಲ್ಲಿರುವ ಇ.ಎಸ್.ಐ. ಆಸ್ಪತ್ರೆಗೆ ಪ್ರತಿ ನಿಮಿಷಕ್ಕೆ 500 ಲೀಟರ್ ಸಾಮರ್ಥ್ಯದ ಆಕ್ಸಿಜನ್ ಜನರೇಟರ್‌ಗಳನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದೆ ಎಂದು ಸಂಸದ ಜಿ. ಎಂ.ಸಿದ್ದೇಶ್ವರ ತಿಳಿಸಿದ್ದಾರೆ.

ಎರಡೂ ಆಸ್ಪತ್ರೆಗಳ ಬಳಿ ಈಗಾಗಲೇ ಆಕ್ಸಿಜನ್ ಜನರೇಟರ್ ಅಳವಡಿಸಲು ಜಾಗ ಗುರುತಿಸಲಾಗಿದ್ದು, ಮುಂದಿನ ಹದಿನೈದು ದಿನಗಳ ಒಳಗಾಗಿ ಸಿವಿಲ್ ಕಾಮಗಾರಿಯನ್ನು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರದವರು ಕೈಗೊಳ್ಳಲಿದ್ದಾರೆ. ನಂತರ ಆಕ್ಸಿಜನ್ ಜನರೇಟರ್‌ಗಳನ್ನು ರಕ್ಷಣಾ ಸಂಶೋಧನಾ ಅಭಿವೃದ್ಧಿ ಸಂಸ್ಥೆಯವರು ಅಳವಡಿಸಲಿದ್ದಾರೆ ಎಂದು ಅವರು ವಿವರಿಸಿದ್ದಾರೆ.

## ಒಲಿಂಪಿಕ್ ಸಂಭವನೀಯರಿಗೆ ಪ್ರೋತ್ಸಾಹ ಧನ

ಬೆಂಗಳೂರು, ಜೂ. 26 - ಟೋಕಿಯೋ ಒಲಿಂಪಿಕ್ ಗೆ ರಾಜ್ಯದ ಐವರು ಕ್ರೀಡಾಪಟುಗಳು ಸಂಭವನೀಯ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದು, ಆಯ್ಕೆಯಾಗುವ ಕ್ರೀಡಾಪಟುಗಳಿಗೆ ತಲಾ 10 ಲಕ್ಷ ರೂ. ಪ್ರೋತ್ಸಾಹ ಧನ ಘೋಷಿಸಿ ಆದೇಶ ಹೊರಡಿಸಲಾಗಿದೆ. ಒಲಿಂಪಿಕ್ ಕ್ರೀಡಾಕೂಟವು ಜಪಾನ್ ಟೋಕಿಯೋದಲ್ಲಿ ಜುಲೈ 23 ರಿಂದ ಸೆಪ್ಟಂಬರ್ 5 ರ ವರೆಗೆ ನಡೆಯಲಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ಡಾ. ನಾರಾಯಣ ಗೌಡ ಈ ಸಂಬಂಧ ಅಧಿಕಾರಿಗಳ ಜೊತೆ ಸಭೆ ನಡೆಸಿದ್ದರು. ಫೌವಾದ್ ಮಿರ್ಜಾ (ಈಕ್ವೆಸ್ಟ್ರಿಯನ್) ಪಂದ್ಯಾವಳಿಗೆ ಆಯ್ಕೆಯಾಗಿದ್ದಾರೆ.

ಎಸ್.ವಿ. ಸುನೀಲ್ - ಹಾಕಿ, ರೋಹನ್ ಬೋಪಣ್ಣ – ಟೆನ್ನಿಸ್, ಶ್ರೀಹರಿ ನಟರಾಜ್ - ಈಜು, ಅದಿತಿ ಅಶೋಕ್ - ಗಾಲ್ಫ್ ಸಂಭವನೀಯರಾಗಿದ್ದಾರೆ.

# ಕಿಟ್ ವಿತರಣೆ ನೆಪದಲ್ಲಿ ಕಟ್ಟಡ ಕಾರ್ಮಿಕ ಮಂಡಳಿಯ ಸೆಸ್ ಹಣ ದುರುಪಯೋಗ

ದಾವಣಗೆರೆ, ಜೂ.26- ಫುಡ್ ಕಿಟ್ ವಿತರಣೆ ನೆಪದಲ್ಲಿ ಕಟ್ಟಡ ಕಾರ್ಮಿಕರ ಮಂಡಳಿಯ ಸೆಸ್ ಹಣವನ್ನು ಕಾರ್ಮಿಕ ಸಚಿವರು ಹಾಗೂ ಇಲಾಖೆ ಅಧಿಕಾರಿಗಳು ದುರುಪಯೋಗ ಮಾಡಲು ಹೊರಟಿದ್ದಾರೆ ಎಂದು ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಹೆಚ್.ಜಿ. ಉಮೇಶ್ ಆರೋಪಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾತನಾಡಿದ ಅವರು, ಕಟ್ಟಡ ಕಾರ್ಮಿಕರ ದುಡಿಮೆಯಿಂದ ಸೆಸ್ ರೂಪದಲ್ಲಿ ಸಂಗ್ರಹಿಸಿರುವ ಹಣದಲ್ಲಿ ಫುಡ್ ಕಿಟ್ ಕೊಡಲು ಕಾರ್ಮಿಕ ಸಚಿವರು ಮುಂದಾಗಿದ್ದಾರೆ ಎಂದರು.

ಕಟ್ಟಡಗಳ ಮಾಲೀಕರು ಸ್ಥಳೀಯ ಸಂಸ್ಥೆಗಳಲ್ಲಿ ಕಟ್ಟಡ ನಿರ್ಮಾಣಕ್ಕೆ ಪರವಾನಿಗೆ ಪಡೆಯುವ ಸಂದರ್ಭದಲ್ಲಿ ಕಟ್ಟಡ ಕಾರ್ಮಿಕರ ಕಲ್ಯಾಣಕ್ಕಾಗಿ ಸಂಗ್ರಹಿಸಿರುವ ಹಣ ಸುಮಾರು 10 ಸಾವಿರ ಕೋಟಿಗಳಷ್ಟಿದೆ. ಈ ಹಣದ ಮೇಲೆ ಕಣ್ಣಿಟ್ಟಿರುವ ಕಾರ್ಮಿಕ ಸಚಿವರು ಈ ಹಣದಲ್ಲಿ ಫುಡ್ ಕಿಟ್ ವಿತರಿಸಿ, ಕಮೀಷನ್ ಪಡೆಯಲು ಮುಂದಾಗಿದ್ದಾರೆ ಎಂದು ದೂರಿದರು.

ಫುಡ್ ಕಿಟ್ ಕೂಡ ಕಳಪೆ ಗುಣಮಟ್ಟದಾಗಿದ್ದು, ಕಿಟ್‌ನಲ್ಲಿರುವ ಯಾವ ಆಹಾರ ಧಾನ್ಯಗಳಾಗಲೀ ಇತರೆ ಆಹಾರ ಪದಾರ್ಥಗಳು ಗುಣಮಟ್ಟದಿಂದ ಕೂಡಿಲ್ಲ. ಇವುಗಳಿಗೆ ದುಪ್ಪಟ್ಟು ದರ ನಿಗದಿ ಮಾಡಿ, ಕಾರ್ಮಿಕರ ಹಣ ಕಬಳಿಕೆ ಮಾಡಲು ಹವಣಿಸುತ್ತಿದ್ದಾರೆ ಎಂದರು.

ಕಟ್ಟಡ ಮತ್ತು ಇತರೆ ನಿರ್ಮಾಣಗಳ ಕಾರ್ಮಿಕರಿಗೆ ದೊರೆಯುವ ಸೌಲಭ್ಯ ಕಬಳಿಸಲು ಇತ್ತೀಚಿನ ದಿನಗಳಲ್ಲಿ ಕೆಲ ಸರ್ಕಾರೇತರ ಸಂಸ್ಥೆಗಳು ತಮಗೆ ಬೇಕಾದವರನ್ನು ಕರೆದುಕೊಂಡು ಹೋಗಿ ನೋಂದಣಿ ಮಾಡಿಸಿ ಗುರುತಿನ ಚೀಟಿ ಕೊಡಿಸಿದ್ದಾರೆ. ರಾಜ್ಯದಲ್ಲಿ 12 ರಿಂದ 15 ಲಕ್ಷ ಕಟ್ಟಡ ಕಾರ್ಮಿಕರು ಇದ್ದಾರೆಂಬ ಅಂಕಿ-ಅಂಶಗಳಿವೆ. ಆದರೆ ಕಾರ್ಮಿಕರ ಸೌಲಭ್ಯ ಕಬಳಿಸಲು 27 ಲಕ್ಷ ಕಾರ್ಮಿಕರ ನೋಂದಣಿ ಮಾಡಿಸಲಾಗಿದೆ. ಇಲಾಖೆ ಬೋಗಸ್ ಕಾರ್ಡುಗಳನ್ನು ರದ್ದುಗೊಳಿಸಿ, ನೈಜ ಫಲಾನುಭವಿಗಳಿಗೆ ಸೌಲಭ್ಯ ದೊರಕುವಂತೆ ಮಾಡಲಿ ಎಂದು ಮನವಿ ಮಾಡಿದರು.

ಸಂಘದ ಪದಾಧಿಕಾರಿಗಳಾದ ವಿ. ಲಕ್ಷ್ಮಣ್, ಪಿ.ಕೆ. ಲಿಂಗರಾಜ್, ಶಿವಕುಮಾರ್ ಡಿ. ಶೆಟ್ಟರ್, ಮೊಹಮ್ಮದ್ ರಫೀಕ್, ಸಿದ್ದೇಶ್ ಹಾಲೇಕಲ್ಲು, ಮುರುಗೇಶ್ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕನ್ಸಲ್ಟೆನ್ಸಿ ಸರ್ವೀಸಸ್
ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲ್ಯಾನ್ಸ್, ಎಸ್ಟಿಮೇಷನ್, ಲೇಔಟ್ ಪ್ಲ್ಯಾನ್ಸ್, ಆನ್‌ಲೈನ್ ಅಪ್‌ಲೋಡ್, ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್) ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:
Civil
ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್ VCS
ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
ಮೊ. 99168 73399, 93432 77422, 99161 73399

ದಿವ್ಯ ಯೋಗ ಮಂದಿರ, ದಾವಣಗೆರೆ.
ಪ್ರತಿನಿತ್ಯ ಯೋಗಾಸನ, ಸೂರ್ಯ ನಮಸ್ಕಾರ, ಪ್ರಾಣಾಯಾಮ ತರಗತಿಗಳನ್ನು ದಿನಾಂಕ : 28.6.2021ರ ಸೋಮವಾರದಿಂದ ಎಂದಿನಂತೆ ಯೋಗ ಕ್ಲಾಸ್ ಪ್ರಾರಂಭ ಮಾಡುತ್ತಿದ್ದೇವೆ.
ಬೆಳಿಗ್ಗೆ 1ನೇ ಬ್ಯಾಚ್ : 5.45 ರಿಂದ 7.00 ಗಂಟೆಯವರೆಗೆ
ಬೆಳಿಗ್ಗೆ 2ನೇ ಬ್ಯಾಚ್ : 7.00 ರಿಂದ 8.00 ಗಂಟೆಯವರೆಗೆ
ಸಂಜೆ 3ನೇ ಬ್ಯಾಚ್ : 5.00 ರಿಂದ 6.15 ಗಂಟೆಯವರೆಗೆ
ಯೋಗಾಸಕ್ತರು ಸಂಪರ್ಕಿಸಿ : 99726 00713
ವಿಶೇಷ ಸೂಚನೆ : ನೇರವಾಗಿ ದಿವ್ಯ ಯೋಗ ಮಂದಿರಕ್ಕೆ ಕ್ಲಾಸ್ ಗೆ ಬರಲು ಆಗದಿದ್ದವರಿಗೆ ಇನ್ನು ಮುಂದೆ ಪ್ರತಿ ಯೋಗ ಬ್ಯಾಚ್ ನ ಆನ್‌ಲೈನ್ ಕ್ಲಾಸನ್ನು zoom app ನಲ್ಲಿಯೂ ಅಟೆಂಡ್ ಮಾಡಬಹುದು.

# ಕೊರೊನಾ ಸಾವಿಗೆ ಯಾವ ರಾಜ್ಯವೂ ಪರಿಹಾರ ನೀಡಿಲ್ಲ : ಕೇಂದ್ರ

ನವದೆಹಲಿ, ಜೂ. 26 - ಕೊರೊನಾದಿಂದ ಮೃತಪಟ್ಟವರ ಕುಟುಂಬಗಳಿಗೆ 4 ಲಕ್ಷ ರೂ. ಪರಿಹಾರ ನೀಡುವುದು ಹಣಕಾಸು ಕಾರ್ಯಸಾಧುವಾದರೂ ಸಹ, ಇಂತಹ ಕ್ರಮ ದೇಶದ ಸಂಪನ್ಮೂಲಗಳನ್ನು ವಿವೇಚನೆಯಿಂದ ಹಾಗೂ ಸಮರ್ಪಕವಾಗಿ ಬಳಸಿಕೊಳ್ಳುವ ದೃಷ್ಟಿಯಿಂದ ಇಂತಹ ಪರಿಹಾರ ನೀಡಲಾಗದು ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಹೇಳಿದೆ.

ಕೊರೊನಾದಿಂದ ಮೃತರಾದವರ ಕುಟುಂಬದವರಿಗೆ ತಲಾ 4 ಲಕ್ಷ ರೂ. ಪರಿಹಾರ ನೀಡಬೇಕು ಹಾಗೂ ಕೊರೊನಾದಿಂದ ಮೃತರಾದವರಿಗೆ ಮರಣ ಪ್ರಮಾಣ ಪತ್ರ ಕೊಡುವ ಪ್ರಕ್ರಿಯೆ ಸಡಿಲಿಸಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಈ ಕುರಿತು ಕೇಂದ್ರ ಸರ್ಕಾರ ಹೆಚ್ಚುವರಿ ಪ್ರಮಾಣ ಪತ್ರ ಸಲ್ಲಿಸಿದೆ. ನ್ಯಾಯಾಲಯ ಅರ್ಜಿಯ ಕುರಿತ ತೀರ್ಪನ್ನು ಕಾಯ್ದಿರಿಸಿದೆ.

**4 ಲಕ್ಷ ರೂ. ಪರಿಹಾರಕ್ಕೆ ಕೇಂದ್ರ ಸರ್ಕಾರದ ಒಲವಿಲ್ಲ**

ಚಂಡಮಾರುತ, ಬರ, ಭೂಕಂಪ, ಅಗ್ನಿ ಅನಾಹುತ, ಪ್ರವಾಹ, ಸುನಾಮಿ, ಭೂಕುಸಿತ, ಮೇಘಸ್ಫೋಟ ಸೇರಿದಂತೆ 12 ನಿರ್ದಿಷ್ಟ ಅನಾಹುತಗಳಿಗೆ ಕೇಂದ್ರ ಸರ್ಕಾರ ಪರಿಹಾರ ನೀಡುತ್ತಿದೆ. ಇದರಲ್ಲಿ ಕೊರೊನಾ ಪಿಡುಗು ಸೇರಿಲ್ಲ.

ಇದರ ಜೊತೆಗೆ, ಎಸ್.ಡಿ.ಆರ್.ಎಫ್. ನಿಧಿ ಶೇ.10ರಷ್ಟನ್ನು ನೈಸರ್ಗಿಕ ವಿಕೋಪಗಳ ಸಂದರ್ಭದಲ್ಲಿ ಪರಿಹಾರವಾಗಿ ನೀಡುವ ಅವಕಾಶವಿದೆ. ಇದನ್ನು ಸ್ಥಳೀಯ ಉದ್ದೇಶಗಳಿಗೆಬಳಸಿಕೊಳ್ಳಬಹುದು.ಆದರೆ,ಯಾವುದೇ ರಾಜ್ಯ ಸರ್ಕಾರ ಎಸ್.ಡಿ.ಆರ್.ಎಫ್. ನಿಧಿಯಿಂದ ಇದುವರೆಗೂ ಕೊರೊನಾದಿಂದ ಮೃತರಾದ ಕುಟುಂಬಕ್ಕೆ ಪರಿಹಾರ ನೀಡಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ.

ತೀವ್ರವಾಗಿ ಹರಡುವ ಕೊರೊನಾ ಎದುರಿಸಲು ಲಭ್ಯವಿರುವ ಎಲ್ಲ ಹಣಕಾಸು, ಮಾನವ ಹಾಗೂ ಮೂಲಭೂತ ಸೌಲಭ್ಯವನ್ನು ಸಮರ್ಪಕವಾಗಿ ಹಾಗೂ ವಿವೇಚನೆಯಿಂದ ಬಳಸಿಕೊಳ್ಳಲು ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ನೈಸರ್ಗಿಕ ವಿಕೋಪಗಳಿಗೆ ಪರಿಹಾರ ನೀಡುವುದನ್ನು ಎಸ್.ಡಿ.ಆರ್.ಎಫ್. ಹಾಗೂ ಎನ್.ಡಿ.ಆರ್.ಎಫ್.ಗಳಿಗೆ ಬಿಡುವುದು ಸೂಕ್ತ ಎಂದು ಪ್ರಮಾಣ ಪತ್ರದಲ್ಲಿ ಹೇಳಲಾಗಿದೆ.

## ಡಿಜಿಟಲ್ ಸೌಲಭ್ಯವಿಲ್ಲದಿದ್ದರೂ ಲಸಿಕೆಗೆ ತೊಂದರೆಯಾಗದು

**ಸುಪ್ರೀಂ ಕೋರ್ಟ್‌ಗೆ ಕೇಂದ್ರದ ಪ್ರಮಾಣ ಪತ್ರ**

ನವದೆಹಲಿ, ಜು. 26 – ಡಿಜಿಟಲ್ ಸೌಲಭ್ಯವಿರದ ಕಾರಣಕ್ಕಾಗಿ ಯಾರೂ ಕೊರೊನಾ ಲಸಿಕೆಯಿಂದ ವಂಚಿತರಾಗುವುದಿಲ್ಲ ಎಂದಿರುವ ಕೇಂದ್ರ ಸರ್ಕಾರ, ಅಡೆ ತಡೆಗಳನ್ನು ಮೀರಿ ಲಸಿಕೆಗೆ ನೋಂದಣಿ ಮಾಡಿಸಿಕೊಳ್ಳಲು ಕೊವಿನ್ ವೆಬ್ ತಾಣ ರೂಪಿಸಲಾಗಿದೆ ಎಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಕೊರೊನಾ ಲಸಿಕೆ ಮತ್ತಿತರೆ ಸೌಲಭ್ಯಗಳ ಕುರಿತು ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಿತ ವಿಚಾರಣೆ ನಡೆಸುವಾಗ ಕೇಂದ್ರ ಸರ್ಕಾರ ಈ ಪ್ರಮಾಣ ಪತ್ರ ಸಲ್ಲಿಸಿದ್ದು, ಡಿಜಿಟಲ್ ಉಪಕರಣ ಇಲ್ಲವೇ ಇಂಟರ್‌ನೆಟ್ ಸೌಲಭ್ಯ ಇಲ್ಲ ಎಂಬ ಕಾರಣಕ್ಕಾಗಿ ಲಸಿಕೆಗೆ ತೊಂದರೆಯಾಗದು ಎಂದು ಹೇಳಿದೆ.

ಲಸಿಕೆ ಪಡೆಯಲು ಆನ್‌ಲೈನ್ ನೋಂದಣಿ ಕಡ್ಡಾಯವಲ್ಲ. ಲಸಿಕೆಗೆ ನೋಂದಾಯಿಸಲು ಬಯಸುವವರು ಹತ್ತಿರದ ಲಸಿಕಾ ಕೇಂದ್ರಕ್ಕೆ ಹೋಗಿ ಆರೋಗ್ಯ ಕಾರ್ಯಕರ್ತರ ಮೂಲಕ ನೋಂದಣಿ ಮಾಡಿಸಿಕೊಳ್ಳಬಹುದು. ನಂತರ ಆ ವ್ಯಕ್ತಿಗೆ ಲಸಿಕೆ ನೀಡಲಾಗುವುದು ಎಂದು ಕೇಂದ್ರ ಸರ್ಕಾರ ಹೇಳಿದೆ.

ಕೊವಿನ್ ವೆಬ್ ತಾಣದಲ್ಲಿ ಜೂನ್ 23ರವರೆಗೆ 32.22 ಕೋಟಿ ಫಲಾನುಭವಿಗಳು ನೋಂದಣಿ ಮಾಡಿಸಿಕೊಂಡಿದ್ದಾರೆ. ಇವರಲ್ಲಿ 19.13 ಕೋಟಿ ಜನರು ನೇರವಾಗಿ ಲಸಿಕಾ ತಾಣದಲ್ಲಿ ನೋಂದಣಿ ಮಾಡಿಸಿಕೊಂಡಿದ್ದಾರೆ ಎಂದು ಸರ್ಕಾರ ಹೇಳಿದೆ.

## ಬಿಜೆಪಿಯ 2 ಲಕ್ಷ ಕಾರ್ಯಕರ್ತರಿಗೆ ತುರ್ತು ವೈದ್ಯಕೀಯ ನೆರವು ತರಬೇತಿ

ಬೆಂಗಳೂರು, ಜೂ. 25 – ಎರಡು ಲಕ್ಷ ಕಾರ್ಯಕರ್ತರಿಗೆ ಬೂತ್ ಹಂತದಲ್ಲಿ ಆಕ್ಸಿಮೀಟರ್, ಕೋವಿಡ್ ಕಿಟ್, ರಕ್ತದೊತ್ತಡ ತಪಾಸಣೆ ಹಾಗೂ ತುರ್ತು ವೈದ್ಯಕೀಯ ನೆರವಿನ ತರಬೇತಿ ನೀಡಲು ಯೋಜಿಸಿರುವುದಾಗಿ ರಾಜ್ಯ ಬಿಜೆಪಿ ತಿಳಿಸಿದೆ. ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಬಿಜೆಪಿ ಸಂಘಟನಾ ಕಾರ್ಯದರ್ಶಿ ಅರುಣ್ ಕುಮಾರ್ ಹೇಳಿದ್ದಾರೆ.

## ರಾಜ್ಯದಲ್ಲಿ 4,272 ಸೋಂಕಿತರು

ಬೆಂಗಳೂರು, ಜೂ. 26 – ರಾಜ್ಯದಲ್ಲಿ ಶನಿವಾರ 4,272 ಕೊರೊನಾ ಸೋಂಕಿತರು ಕಂಡು ಬಂದಿದ್ದು, ಈ ದಿನ 115 ಜನರು ಸೋಂಕಿನಿಂದ ಸಾವನ್ನಪ್ಪಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಇದೇ ದಿನ 6,126 ಜನ ಕೊರೊನಾದಿಂದ ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ. ಬೆಂಗಳೂರು ನಗರ ಒಂದರಲ್ಲೇ 955 ಸೋಂಕಿತರು ಕಂಡು ಬಂದಿದ್ದು, 16 ಸಾವುಗಳು ಸಂಭವಿಸಿವೆ.

ರಾಜ್ಯದಲ್ಲೀಗ ಸಕ್ರಿಯ ಸೋಂಕಿತರ ಸಂಖ್ಯೆ 1.05 ಲಕ್ಷವಾಗಿದೆ. ಪಾಸಿಟಿವ್ ದರ ಶೇ.2.58 ಆಗಿದ್ದರೆ, ಸಾವಿನ ಪ್ರಮಾಣ ಶೇ.2.69 ಆಗಿದೆ.

## ಸಿದ್ದರಾಮಯ್ಯ ಮುಂದಿನ ಸಿಎಂ ಆಗಬೇಕೆಂಬುದು ಜನಾಪೇಕ್ಷೆ

ದಾವಣಗೆರೆ, ಜೂ.26- ರಾಜ್ಯದ ಜನತೆ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳ ಆಡಳಿತವನ್ನೂ ಕಂಡಿದ್ದಾರೆ. ಸಿದ್ದರಾಮಯ್ಯ ಅವರಿಗೆ ಮತ ನೀಡಿ, ಅಧಿಕಾರಕ್ಕೆ ತರದೇ ತಪ್ಪು ಮಾಡಿದ್ದೇವೆಂದು ಜನರಿಗೂ ಈಗ ಅನಿಸುತ್ತಿದೆ. ಸಿದ್ದರಾಮಯ್ಯ ಮುಂದಿನ ಮುಖ್ಯಮಂತ್ರಿ ಆಗಬೇಕೆಂಬುದು ನಾಡಿನ ಜನರ ಅಪೇಕ್ಷೆ ಎಂದು ಹರಿಹರ ಶಾಸಕ ಎಸ್. ರಾಮಪ್ಪ ಪುನರುಚ್ಚರಿಸಿದ್ದಾರೆ.



ನಗರದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜನರ ಅಪೇಕ್ಷೆಯಂತೆ ಸಿದ್ದರಾಮಯ್ಯ ಮುಂದಿನ ಮುಖ್ಯಮಂತ್ರಿ ಆಗಬೇಕೆಂದು ಹೇಳಿದ್ದೆ. ಹಿಂದೆ ಸಿದ್ದರಾಮಯ್ಯ ಸಿಎಂ ಆಗಿದ್ದ ಅವಧಿಯಲ್ಲಿ ಉತ್ತಮ ಆಡಳಿತ ನೀಡಿದ್ದಾರೆ. ನಾವು ಹೋದಲ್ಲೆಲ್ಲಾ ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿ ಆಗಬೇಕೆಂದು ಜನರು ಅಪೇಕ್ಷಿಸುತ್ತಿದ್ದಾರೆ ಎಂದು ತಿಳಿಸಿದರು.

ಮುಂದಿನ ಮುಖ್ಯಮಂತ್ರಿ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ತೀರ್ಮಾನ ಕೈಗೊಳ್ಳುತ್ತದೆ. ಜನರೂ ಸಹ ಮತ್ತೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಬೇಕು, ಕಾಂಗ್ರೆಸ್ ಪಕ್ಷವೇ ಅಧಿಕಾರಕ್ಕೆ ಬರಬೇಕೆಂದು ಬಯಸುತ್ತಿದ್ದಾರೆ ಎಂದು ಹೇಳಿದರು.

### ಕಮೀಷನ್ ಕೊಟ್ಟರೆ ಅನುದಾನ

ಮುಖ್ಯಮಂತ್ರಿ ಯಡಿಯೂರಪ್ಪ ಪುತ್ರ ವಿಜಯೇಂದ್ರಗೆ ಕಮೀಷನ್ ಕೊಟ್ಟರಷ್ಟೇ ಅನುದಾನ ಬಿಡುಗಡೆಯಾಗುತ್ತದೆ. ಇಲ್ಲದಿದ್ದರೆ ಅಂತಹವರಿಗೆ ಅನುದಾನ ಇಲ್ಲ. ನನ್ನ ಹರಿಹರ ಕ್ಷೇತ್ರಕ್ಕೆ ಅನುದಾನ ಬಿಡುಗಡೆ ಮಾಡುವಂತೆ 2 ಬಾರಿ ಮನವಿ ಮಾಡಿದ್ದೇನೆ. ಪಕ್ಕದ ಹೊನ್ನಾಳಿ ಕ್ಷೇತ್ರಕ್ಕೆ ಅನುದಾನ ಕೊಡುತ್ತಾರೆ. ನನ್ನ ಕ್ಷೇತ್ರಕ್ಕೆ ಅನುದಾನವನ್ನೇ ನೀಡುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಿಜೆಪಿ ಸರ್ಕಾರ ಕೋವಿಡ್ ವೈರಸ್‌ನ ಹೆಸರಿನಲ್ಲಿ ಎಲ್ಲಾ ಟೆಂಡರ್‌ಗಳನ್ನು ಕ್ಯಾನ್ಸಲ್ ಮಾಡಿ ಲೂಟಿ ಮಾಡುತ್ತಿದೆ. ಬಿಜೆಪಿ ಶಾಸಕರೇ ಅನುದಾನ ಬಿಡುಗಡೆ ಮಾಡಿಸಲು ಕಮೀಷನ್ ಕೊಡಬೇಕಾದ ಸ್ಥಿತಿ ಇದೆ. ಶೇ.10ರಷ್ಟು ಕಮೀಷನ್ ಕೊಟ್ಟರಷ್ಟೇ ಅನುದಾನ ಬಿಡುಗಡೆಯಾಗುತ್ತದೆ. ಇದೊಂದು ಪರ್ಸೆಂಟೇಜ್ ಸರ್ಕಾರ ಎಂದು ಕಿಡಿಕಾರಿದರು.

## 93.477 ಕೆಜಿ ತೂಕದ ಗಾಂಜಾ ದಹನ

### ಜಿಲ್ಲೆಯ ಪೊಲೀಸ್ ಠಾಣೆಗಳಲ್ಲಿ ಮಾದಕ ವಸ್ತು ವಿರೋಧಿ ದಿನ



ದಾವಣಗೆರೆ, ಜೂ.26 - ಅಂತರರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನದ ಅಂಗವಾಗಿ ಇಂದು ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆಗಳು ಮತ್ತು ಕಚೇರಿಗಳ ವ್ಯಾಪ್ತಿಯಲ್ಲಿ ಮಾದಕ ವಸ್ತು ವಿರೋಧಿ ದಿನವನ್ನು ಆಚರಿಸಲಾಯಿತು.

ಜನರಿಗೆ ಮಾದಕ ವಸ್ತುಗಳ ಬಗ್ಗೆ ಮತ್ತು ಅದರಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಮಾದಕ ವಸ್ತು ವಿರೋಧಿ ದಿನ ಆಚರಣೆ ಅಂಗವಾಗಿ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಎನ್‌ಡಿಪಿಎಸ್ ಕಾಯ್ದೆಯಡಿ ದಾಖಲಾದ 18 ಪ್ರಕರಣಗಳಲ್ಲಿ ವಶಪಡಿಸಿಕೊಂಡ 93.477 ಕೆಜಿ ತೂಕದ ಗಾಂಜಾವನ್ನು ಎಎಸ್ಪಿ ಎಂ. ರಾಜೀವ್, ಡಿವೈಎಸ್ಪಿ ಗಳಾದ ನಾಗೇಶ್ ಐತಾಳ್, ಬಿ.ಎಸ್. ಬಸವರಾಜ್, ಕೆ.ಎಂ. ಸಂತೋಷ್ ಸಮ್ಮುಖದಲ್ಲಿ ನಗರದ ಹೊರ ವಲಯದಲ್ಲಿ ಸುಟ್ಟುಹಾಕಲಾಯಿತು.

## ಅಕ್ರಮ ಪಡಿತರ ಅಕ್ಕಿ ಜಾಲ ಪತ್ತೆ ಒಂದೂವರೆ ಲಕ್ಷ ಮೌಲ್ಯದ ಅಕ್ಕಿ ವಶ

ದಾವಣಗೆರೆ, ಜೂ.26- ಅಂತರ್ ಜಿಲ್ಲಾ ಪಡಿತರ ಅಕ್ಕಿಯನ್ನು ಅಕ್ರಮವಾಗಿ ದಾಸ್ತಾನು ಮಾಡಿ ಸಾಗಾಟ ಮಾಡುತ್ತಿದ್ದ ಜಾಲ ಪತ್ತೆ ಹಚ್ಚಿರುವ ಪೊಲೀಸರು 1 ಲಕ್ಷದ 50 ಸಾವಿರ ರೂ. ಮೌಲ್ಯದ 50 ಕೆ.ಜಿಯ 200 ಚೀಲಗಳ ಸಹಿತ ಒಂದು ಲಾರಿಯನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಪಡಿತರ ಅಕ್ಕಿಯನ್ನು ಅಕ್ರಮವಾಗಿ ದಾಸ್ತಾನು ಮಾಡಿ ರಾಣೇಬೆನ್ನೂರಿನಿಂದ ತುಮಕೂರು ಕಡೆಗೆ ಸಾಗಾಟ ಮಾಡುತ್ತಿದ್ದ ವೇಳೆ ಗ್ರಾಮಾಂತರ ವೃತ್ತದ ಸಿಪಿಐ ಬಿ. ಮಂಜುನಾಥ್ ಅವರಿಗೆ ಬಂದ ಮಾಹಿತಿ ಮೇರೆಗೆ ಆಹಾರ ನಿರೀಕ್ಷಕ ಎಂ. ಮಂಜುನಾಥ, ಪೊಲೀಸ್ ಸಿಬ್ಬಂದಿಗಳಾದ ವಿಶ್ವ, ನಾಗರಾಜಯ್ಯ, ಅಶೋಕ್ ಒಳಗೊಂಡ ಪೊಲೀಸ್ ತಂಡವು ಲಾರಿಯನ್ನು ಹೆಬ್ಬಾಳ್ ಟೋಲ್ ಗೇಟ್ ಹತ್ತಿರ ಹಿಡಿದು ಲಾರಿ ಚಾಲಕ ಮತ್ತು ಈ ಜಾಲದ ಮುಖ್ಯ ರೂವಾರಿ ಸೇರಿದಂತೆ ಇಬ್ಬರು ಆರೋಪಿತರನ್ನು ಬಂಧಿಸಿದ್ದಾರೆ.

## ಲಸಿಕೆ ಖಾಲಿ : ಸಾರ್ವಜನಿಕರ ಆಕ್ರೋಶ



**ಹರಿಹರ**

ಹರಿಹರ, ಜೂ.26- ನಗರದ ನೀರಾವರಿ ಇಲಾಖೆಯ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕರಿಗೆ ಕೊರೊನಾ ಲಸಿಕೆ ನೀಡುತ್ತಿದ್ದು, ಲಸಿಕೆಯನ್ನು 140 ಜನರಿಗೆ ನೀಡಿ, ಉಳಿದವರಿಗೆ ಸೋಮವಾರ ಬರಲು ಹೇಳಿದಾಗ ವ್ಯವಸ್ಥೆಯ ಬಗ್ಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ ಘಟನೆ ಇಂದು ನಡೆಯಿತು.

ನೂರಾರು ಸಂಖ್ಯೆಯಲ್ಲಿ ಸೇರಿದ್ದ ಸಾರ್ವಜನಿಕರು ಆಕ್ರೋಶಗೊಂಡು ಕಂಪ್ಯೂಟರ್ ಆಪರೇಟರ್ ತಿಪ್ಪೇಸ್ವಾಮಿ ಎಂಬವವರ ಜೊತೆ ವಾಗ್ವಾದಕ್ಕಿಳಿದರು.

ಇದರಿಂದಾಗಿ ವಿಚಲಿತರಾದ ತಿಪ್ಪೇಸ್ವಾಮಿ ಅವರು, ನಮಗೆ ಹಿರಿಯ ಅಧಿಕಾರಿಗಳು ಕೇವಲ 140 ಜನರಿಗೆ ಲಸಿಕೆಯನ್ನು ಹಾಕುವುದಕ್ಕೆ ಆದೇಶ ಮಾಡಿರುತ್ತಾರೆ. ಅದನ್ನು ಪಾಲನೆ ಮಾಡುತ್ತಿರುವುದಾಗಿ ಹೇಳಿದರು.

ವಾಟ್ಸಾಪ್‌ಗಳಲ್ಲಿ ಲಸಿಕೆ ಹಾಕುವ ಕುರಿತು ಮಾಹಿತಿ ತಿಳಿದ ಜನರು ಸ್ಥಳಕ್ಕೆ ಬೆಳಿಗ್ಗೆಯೇ ಆಗಮಿಸಿದ್ದರು. ಸರತಿ ಸಾಲಿನಲ್ಲಿ ನಿಂತವರಿಗೆ ನಿರಾಶೆಯಾಗಿದ್ದು, ವಾಪಸ್ ಹೋಗುವಾಗ ವ್ಯವಸ್ಥೆ ಕುರಿತು ಹಿಡಿಶಾಪ ಹಾಕುತ್ತಾ ತೆರಳಿದರು.

## ಬೇಸಿಗೆಯಲ್ಲಿ ಅಣೆಕಟ್ಟು ಕಾಮಗಾರಿ ಕೈಗೊಳ್ಳಲಿ



ದಾವಣಗೆರೆ, ಜೂ.26- ಭದ್ರಾ ಜಲಾಶಯದ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಜುಲೈ, ಆಗಸ್ಟ್ ತಿಂಗಳುಗಳಲ್ಲಿ ಅಧಿಕ ಮಳೆ ಸುರಿಯುವ ಕಾರಣ ಅಣೆಕಟ್ಟಿಗೆ ಅಪಾಯವಾಗಲಿದೆ. ಆದ್ದರಿಂದ ಸ್ಟಿಲ್ಲಿಂಗ್ ಬೇಸಿನ್ ಕಾಮಗಾರಿಯನ್ನು ಬೇಸಿಗೆ ಕಾಲದಲ್ಲಿ ಮಾಡುವಂತೆ ಭಾರತೀಯ ರೈತ ಒಕ್ಕೂಟದ ಅಧ್ಯಕ್ಷ ಹೆಚ್.ಆರ್.ಲಿಂಗರಾಜ್, ಉಪಾಧ್ಯಕ್ಷ ಎಸ್. ನಾಗರಾಜ್ ರಾವ್ ಕೊಂಡಜ್ಜಿ ಒತ್ತಾಯಿಸಿದ್ದಾರೆ.


ಭದ್ರಾ ಜಲಾಶಯದಲ್ಲಿ ಕ್ರಸ್ಟ್‌ಗೇಟ್‌ಗಳಿಂದ ನೀರು ನದಿಗೆ ಧುಮುಕುವ ಕೆಳ ಭಾಗದಲ್ಲಿ ಸ್ಟಿಲ್ಲಿಂಗ್ ಬೇಸಿನ್ ಕಾಮಗಾರಿಯು 2 ವರ್ಷದ ಹಿಂದೆ ಮಾಡಲಾಗಿತ್ತು. ಈಗ ನೀರಿನಲ್ಲಿ ಕೊಚ್ಚಿ ಹೋಗಿ ಜಲಾಶಯ ಅಪಾಯ ಮಟ್ಟದಲ್ಲಿದೆ ಎಂದು ಹೇಳಿದ್ದಾರೆ. ಅಣೆಕಟ್ಟು ನಿರ್ಮಾಣ ಮಾಡಿದಾಗ ಗಾರೆಯಿಂದ ಬೆಡ್ ಹಾಕಿದ್ದು, ಭದ್ರವಾಗಿತ್ತು. ಭದ್ರಾ ಅಣೆಕಟ್ಟು, ರಾಷ್ಟ್ರೀಯ ಅಣೆಕಟ್ಟೆಗೆ ಸೇರಿಸಿದ್ದು, ವಿಶ್ವ ಬ್ಯಾಂಕ್ ದೇಶದ ಎಲ್ಲಾ ಅಣೆಕಟ್ಟೆಗೆ ಆರ್ಥಿಕ ನೆರವು ಕೊಡುತ್ತದೆಂದು ಗಟ್ಟಿಮುಟ್ಟಾಗಿದ್ದ ಗಾರೆ ತೆಗೆದು ಕಬ್ಬಿಣ ಕಟ್ಟಿ 1 1/2 ಅಡಿ ದಪ್ಪದ ಆರ್‌ಸಿಸಿ ಹಾಕಬೇಕೆಂದು ಎಸ್ಟಿಮೇಟ್ (ಅಂದಾಜು) ಮಾಡಿ ಅಧಿಕಾರಿಗಳು ರಾಜಕಾರಣಿಗಳ ಮೂಲಕ ವಿಶ್ವ ಬ್ಯಾಂಕ್‌ನಿಂದ 7 ಕೋಟಿ ರೂ. ಮಂಜೂರು ಮಾಡಿಸಿ, 2018ರಲ್ಲಿ ಕಳಪೆ ಕಾಮಗಾರಿ ಮಾಡಿಸಿದ್ದರಿಂದ ಜಲಾಶಯ ಅಪಾಯದಲ್ಲಿದೆ ಎಂದು ಹೇಳಿದ್ದಾರೆ.

ಪುನಃ ಮಳೆಗಾಲದಲ್ಲಿ ಈ ಕಾಮಗಾರಿ ನಡೆಸುವುದರಿಂದ ಹೆಚ್ಚುವರಿ ನೀರು ಬಂದು 186 ಅಡಿಯ ನೀರು ಧುಮುಕುವುದರಿಂದ ಅಪಾಯದ ಸ್ಥಿತಿ ತಲುಪಲಿದೆ. ಆದ್ದರಿಂದ ಕಾಮಗಾರಿಯನ್ನು ಬೇಸಿಗೆ ಕಾಲದಲ್ಲಿ ನಡೆಸಲಿ ಎಂದು ಒತ್ತಾಯಿಸಿದ್ದಾರೆ.

ಕಳಪೆ ಕಾಮಗಾರಿ ನಡೆಸಿದ ಗುತ್ತಿಗೆದಾರರು ಹಾಗೂ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ದೂರಿದ್ದಾರೆ. ಮುಖ್ಯಮಂತ್ರಿಗಳು, ಮಾಜಿ ಮುಖ್ಯಮಂತ್ರಿ ಹಾಗೂ ಜಿಲ್ಲಾ ಮಂತ್ರಿಗಳು ಇರುವ ಜಿಲ್ಲೆಯಲ್ಲೇ ಈ ಅವಘಡ ನಡೆದಿದೆ. ಈ ಭಾಗದ ಸಂಸದರು, ಶಾಸಕರು ಕೂಡ ನಿರ್ಲಕ್ಷ್ಯ ವಹಿಸಿದ್ದಾರೆ. ಕೂಡಲೇ ಎಚ್ಚೆತ್ತುಕೊಳ್ಳದಿದ್ದರೆ, ಹೋರಾಟಕ್ಕೆ ಅಣಿಯಾಗಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

## ವಿದ್ಯಾಪೋಷಕ ಸಂಸ್ಥೆಯಲ್ಲಿ ಉಚಿತ ಆಪ್ತ ಸಮಾಲೋಚನೆ

ದಾವಣಗೆರೆ, ಜೂ.26- ಯುವ ಪೀಳಿಗೆ ಹಲವಾರು ಸಮಸ್ಯೆ/ಒತ್ತಡಗಳನ್ನು ಎದುರಿಸುತ್ತಿದ್ದು, ಹಲವಾರು ತೊಂದರೆಗಳನ್ನು ಅನುಭವಿಸುತ್ತಿದ್ದು, ವಿದ್ಯಾರ್ಥಿಗಳಲ್ಲಿ ಏಕಾಗ್ರತೆಯ ಕೊರತೆ, ಭಯ, ಆತಂಕ ಇತ್ಯಾದಿಗಳು ಸಹ ಇರಬಹುದು. ಈ ದಿಶೆಯಲ್ಲಿ ವಿದ್ಯಾಪೋಷಕ ಸಂಸ್ಥೆಯಲ್ಲಿ ಉಚಿತ ಆಪ್ತ ಸಮಾಲೋಚನೆ ಸೌಲಭ್ಯವನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಗುವುದು. ವಿದ್ಯಾಪೋಷಕ ಸಂಸ್ಥೆಯಲ್ಲಿ ನುರಿತ ಮಹಿಳಾ ಆಪ್ತ ಸಮಾಲೋಚಕರು ಲಭ್ಯವಿದ್ದು, ವಿದ್ಯಾರ್ಥಿನಿಯರಿಗೆ ಸಮಾಲೋಚಕರೊಂದಿಗೆ ಮುಕ್ತವಾಗಿ ಚರ್ಚಿಸಲು ಅವಕಾಶವಿರುತ್ತದೆ. ಆಸಕ್ತರು ನಂ.307/401, ನಗರ ಕಾಲೋನಿ, ಮಹಿಷಿ ರಸ್ತೆ, ಮಾಳಮಡ್ಡಿ, ಧಾರವಾಡ-580007, ಫೋನ್: 8861201830 ಸಂಪರ್ಕಿಸಬಹುದು.



## ಮುರುಘಾ ವನಕ್ಕೆ ಪ್ರವೇಶ

ಚಿತ್ರದುರ್ಗ, ಜೂ.26- ಕೋವಿಡ್-19 2ನೇ ಅಲೆಯ ಹಿನ್ನೆಲೆಯಲ್ಲಿ ಮುಚ್ಚಲಾಗಿದ್ದ ನಗರದ ಮುರುಘಾ ವನವನ್ನು ನಾಳೆ ದಿನಾಂಕ 27ರ ಭಾನುವಾರದಿಂದ ಕೋವಿಡ್-19 ನಿಯಮಗಳನ್ವಯ ಸಾರ್ವಜನಿಕ ವೀಕ್ಷಣೆಗೆ ಅನುವು ಮಾಡಿಕೊಡಲಾಗಿದೆ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

## ಮಹಾರಾಷ್ಟ್ರ : ಬಾರ್ ಮಾಲೀಕರಿಂದ ಮಾಜಿ ಗೃಹ ಸಚಿವರಿಗೆ 4 ಕೋಟಿ ರೂ.

ಮುಂಬೈ, ಜೂ. 26 – ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಅವರು ಮುಂಬೈನ ಬಾರ್ ಮಾಲೀಕರಿಂದ 4 ಕೋಟಿ ರೂ. ಪಡೆದಿದ್ದರು. ಹಲವಾರು ಡಮ್ಮಿ ಕಂಪನಿಗಳ ಮೂಲಕ ಈ ಹಣವನ್ನು ತಮ್ಮ ಟ್ರಸ್ಟ್‌ಗೆ ತರಿಸಿಕೊಂಡಿದ್ದರು ಎಂದು ಜಾರಿ ನಿರ್ದೇಶನಾಲಯ ನ್ಯಾಯಾಲಯಕ್ಕೆ ತಿಳಿಸಿದೆ.

ದೇಶಮುಖ್ ಆಪ್ತ ಕಾರ್ಯದರ್ಶಿ ಸಂಜೀವ್ ಪಲಂದೆ ಹಾಗೂ ಆಪ್ತ ಸಹಾಯಕ ಕುಂದನ್ ಶಿಂಧೆ ವಿಚಾರಣೆಗೆ ಅರ್ಜಿ ಸಲ್ಲಿಸುವಾಗ ಜಾರಿ ನಿರ್ದೇಶನಾಲಯ ಈ ಮಾಹಿತಿ ನೀಡಿದೆ. ಉಭಯರನ್ನು ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿದೆ. ಈ ಹಿನ್ನೆಲೆಯಲ್ಲಿ ದೇಶಮುಖ್ ಕಳೆದ ಏಪ್ರಿಲ್‌ನಲ್ಲಿ ರಾಜೀನಾಮೆ ನೀಡಿದ್ದರು. ನಂತರ ನ್ಯಾಯಾಲಯ ಉಭಯ ಆರೋಪಿಗಳನ್ನು ಜುಲೈ 1ರವರೆಗೆ ಇಡಿ ಕಸ್ಟಡಿಗೆ ವಹಿಸಿದೆ.

## ಕೊರೊನಾ ವಾರಿಯರ್ಸ್‌ಗೆ ಸನ್ಮಾನ

ಮುಸ್ಲಿಂ ಸಮಾಜ, ಜಿಲ್ಲಾಡಳಿತ ಆಶ್ರಯದಲ್ಲಿ ವಾರಿಯರ್ಸ್‌ಗೆ ಸನ್ಮಾನ ಸಮಾರಂಭವು ಇಂದು ಬೆಳಿಗ್ಗೆ 11 ಕ್ಕೆ ತಾಜ್ ಪ್ಯಾಲೇಸ್‌ನಲ್ಲಿ ನಡೆಯಲಿದೆ.

ಪ್ಯಾಕೇಜಿಂಗ್ ಬ್ಯಾಗ್ ತಯಾರಿಕಾ ಘಟಕದಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ

| ಕೆಲಸ | ಸಂಖ್ಯೆಗಳು |
|---|---|
| ಪ್ರಿಂಟಿಂಗ್ ಆಪರೇಟರ್ | 02 |
| ಆಫೀಸ್ ಬಾಯ್ | 01 |
| ಸಹಾಯಕ ಕೆಲಸಗಾರ (HELPER) | 04 |

ಅನುಭವ ಉಳ್ಳವರಿಗೆ ಮೊದಲ ಆದ್ಯತೆ

Visit With Your Resume
CONTACT 9845379555
ಕೂಡಲೇ ಸಂಪರ್ಕಿಸಿ

JAIN POLY PACKS
Plot No : 15, KIADB, Karur Industrial Area, Textile Park
DAVANAGERE-577005. KARNATAKA
E-mail : jainpolypacks555@gmail.com

ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 26.06.2021 ರಂದು ನಿಧನರಾದ ಹಿರೇ ತೊಗಲೇರಿ ಗ್ರಾಮದ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರು ಮತ್ತು ಜಮೀನ್ದಾರರಾದ

ಶ್ರೀ ಜಿ.ಬಿ. ರಂಗನಾಥ

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ

- ಬಿ.ಜಿ. ನಂದ್ಯಪ್ಪ, ಅಧ್ಯಕ್ಷರು ಗ್ರಾ. ಪಂ ಕುರ್ಕಿ
- ಹೆಚ್.ಎಂ. ನಂದಿನಿ ,ಉಪಾಧ್ಯಕ್ಷರು, ಗ್ರಾ.ಪಂ ಹಿರೇ ತೊಗಲೇರಿ
- ಓದೋಗೌಡ್ರು ರೇವಣಸಿದ್ದಪ್ಪ ಮತ್ತು ಮಕ್ಕಳು, ಕುರ್ಕಿ
- ಹೆಚ್.ಎಂ. ವಿಶ್ವನಾಥಯ್ಯ ಮತ್ತು ಮಕ್ಕಳು, ಹಿರೇತೊಗಲೇರಿ
- ಶ್ರೀಮತಿ ಕಮಲಮ್ಮ ದಿ.ಗುರುಶಾಂತಪ್ಪ ಮತ್ತು ಮಕ್ಕಳು, ಕುರ್ಕಿ
- ಎ.ಎನ್.ವೀರೇಂದ್ರಚಾರಿ, ಮಾಜಿ ಸದಸ್ಯರು ಗ್ರಾ.ಪಂ ಕುರ್ಕಿ

ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 19.06.2021ರಂದು ನಿಧನರಾದ

ಶ್ರೀಮತಿ ಪ್ರೇಮಮ್ಮ ಅವರಿಗೆ

ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

ಶ್ರೀಮತಿ ರೇಣುಕಾ ಶ್ರೀನಿವಾಸ್
ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷರು, ಮಹಾನಗರ ಪಾಲಿಕೆ, ದಾವಣಗೆರೆ
ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಅಳಿಲಪ್ಪರ ವಂಶಸ್ಥರು ಬಂಧು-ಮಿತ್ರರು.

BSC
B.S. CHANNABASAPPA & SONS

ಸೋಮವಾರದಿಂದ ತೆರೆದಿದೆ
ಬೆಳಗ್ಗೆ 9.00 ರಿಂದ ಸಂಜೆ 5.00ರ ವರೆಗೆ

ಗ್ರಾಹಕರ ಗಮನಕ್ಕೆ :
- ನಮ್ಮ ಎಲ್ಲಾ ಸಿಬ್ಬಂದಿವರ್ಗಕ್ಕೆ ಲಸಿಕೆ ಹಾಕಿಸಲಾಗಿದೆ.
- ನಾಲ್ಕು ಜನಕ್ಕಿಂತ ಹೆಚ್ಚಿನ ಗುಂಪಿಗೆ ಅನುಮತಿ ಇಲ್ಲ.
- ಮಕ್ಕಳನ್ನು ಕರೆತರದಿರಿ.
- ಕಡ್ಡಾಯವಾಗಿ ಮಾಸ್ಕ ಧರಿಸಬೇಕು.
- ಸಾಮಾಜಿಕ ಅಂತರ ಕಾಯ್ದುಕೊಳಬೇಕು.
- ಉತ್ತಮ ಸೇವೆಗಾಗಿ ಸಹಕರಿಸಿ.

ಶನಿವಾರ ಮತ್ತು ಭಾನುವಾರ ರಜಾ

ಬಿ.ಎಸ್.ಚನ್ನಬಸಪ್ಪ & ಸನ್ಸ್

BSC ಕಾಳಿಕಾದೇವಿ ಶೋರೂಮ್ | BSC EXCLUSIVE ಡೆಂಟಲ್ ಕಾಲೇಜ್ ಎದುರು | BSC ಪಿ.ಜೆ ಬಡಾವಣೆ ಶೋರೂಮ್

#ಬಟ್ಟೆಅಂಗಡಿಅಂದರೆ BSC

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte